(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈಗ ಲೋಕಸಭಾ ಚುನಾವಣೆ ಸಮೀಪಿಸುತ್ತಿರುವುದರಿಂದ Code of Conduct ಬರುವುದರಿಂದ ಬೇರೆ ಕೆಲಸಗಳಿಗೆ ತೊಂದರೆಯಾಗಬಾರದು. ಈಗ ಈ ಭರವಸೆಯ ಸಂದೇಶ ಹೋಗಬೇಕು. ಇಲ್ಲದಿದ್ದರೆ ಮತ್ತೆ ಅದೇ ಸಮಸ್ಯೆಯಾಗುತ್ತದೆ.

ಅಧ್ಯಕ್ಷರು: ಮಾನ್ಯ ಸಚಿವರೆ, ಸಂದೇಶವನ್ನು ಕಳುಹಿಸಿ. ಮಾನ್ಯ ಎ.ಎಸ್. ಪಾಟೀಲ್‌ರವರು ಮಾತನಾಡುವುದು.

(2) ವಿಷಯ: ಅವಳಿ ಜಿಲ್ಲೆಗೆ ನೀರಾವರಿ ಯೋಜನೆಗಳಿ ನೀರಿನ ಹಂಚಿಕೆಯನ್ನು ಬಚಾವತ್ ತೀರ್ಪಿನಡಿಯಲ್ಲಿ ಹಂಚಿಕೆಯಾದ 173 ಟಿ.ಎಂ.ಸಿ ನೀರಿನಲ್ಲಿ ಕನಿಷ್ಠ 105 ಟಿ.ಎಂ.ಸಿ ನೀರನ್ನು ಮರುಹಂಚಿಕೆ ಮಾಡುವ ಬಗ್ಗೆ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ) (ದೇವರಹಿಪ್ಪರಗಿ): ಮಾನ್ಯ ಅಧ್ಯಕ್ಷರೆ, ಬಚಾವತ್ ತೀರ್ಪಿನಲ್ಲಿ ಎ–ಸ್ಕೀಮ್‌ನಲ್ಲಿ ಹಂಚಿಕೆಯಾದಂತಹ ಸುಮಾರು 173 ಟಿ.ಎಂ.ಸಿ. ನೀರನ್ನು ಪುನಃ ಮರುಹಂಚಿಕೆ ಮಾಡಬೇಕು ಅದರಲ್ಲಿಯೂ ವಿಶೇಷವಾಗಿ ಅವಳಿ ಜಿಲ್ಲೆಗೆ ನೀರಿನ ಮರು ಹಂಚಿಕೆಯಾಗಬೇಕೆಂದು ನಾನು ನಿಯಮ 69 ರಲ್ಲಿ ತಮಗೆ ನೀಡಿದ್ದೇನೆ. ಅದಕ್ಕಾಗಿ ತಾವು ಮಾತನಾಡಲು ಅವಕಾಶ ಕೊಟ್ಟಿದ್ದರಿಂದ ತಮಗೆ ಧನ್ಯವಾದಗಳು.

ಮಾನ್ಯ ಅಧ್ಯಕ್ಷರೆ, ನಾನು ಇವತ್ತು ಏಕೆ ಈ ಪ್ರಶ್ನೆಯನ್ನು ಎತ್ತುತ್ತಿದ್ದೇನೆಂದರೆ, ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಯವರು ಕೂಡ ಕೃಷ್ಣಾ ನದಿಯ ತೀರ್ಪಿನಲ್ಲಿ ಏನು ನೀರಿನ ಹಂಚಿಕೆಯಲ್ಲಿ ಕರ್ನಾಟಕ ರಾಜ್ಯಕ್ಕೆ

ಅನ್ಯಾಯವಾಗಿದೆ, ಅದನ್ನು ಸರಿಪಡಿಸುವುದರ ಸಲುವಾಗಿ ನಾವು ಸುಪ್ರೀಂ ಕೋರ್ಟ್‌ಗೆ ಮನವಿಯನ್ನು ಸಲ್ಲಿಸುತ್ತೇವೆ ಎಂದು statement ಮಾನ್ಯ ಮುಖ್ಯಮಂತ್ರಿಗಳು ಅನ್ನು ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಕರ್ನಾಟಕ ರಾಜ್ಯಕ್ಕೆ ಈ ಕೃಷ್ಣಾ ನದಿಯ ಮಹತ್ವ, ಬಹುಶಃ 64 ವರ್ಷದ ಇತಿಹಾಸದಲ್ಲಿ ಇವತ್ತಿಗೂ ಕೂಡ ಬಹಳ ಜನರಿಗೆ ಕೃಷ್ಣಾ ನದಿ ಎಂದರೆ, ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಅತ್ಯಂತ ದೊಡ್ಡ ನದಿ. ಕರ್ನಾಟಕ ರಾಜ್ಯದ ಸುಮಾರು 60% ಭೌಗೋಳಿಕ ಪ್ರದೇಶ ಕೃಷ್ಣಾ ಬೇಸಿನ್‌ನಲ್ಲಿ ಬರುತ್ತದೆ. ಒಟ್ಟು ಕರ್ನಾಟಕ ರಾಜ್ಯದ ಭೌಗೋಳಿಕ ಪ್ರದೇಶವನ್ನು ನಾವು ನೋಡಿದರೆ, ಕೃಷ್ಣಾ ಬೇಸಿನ್ 58.93% ಏರಿಯಾ ಬಂದರೆ, ಕಾವೇರಿ ಬೇಸಿನ್ 18.84% ಬರುತ್ತದೆ. ಗೋದಾವರಿ ಬೇಸಿನ್ 2.31% ಬರುತ್ತದೆ.

ಅಧ್ಯಕ್ಷರು: ಮಾನ್ಯ ಪಾಟೀಲ್‌ರವರೆ, ನೀವು ಅಲ್ಲಿಗೆಲ್ಲಾ ಹೋಗಬೇಡಿ. ನೇರವಾಗಿ ವಿಷಯಕ್ಕೆ ಬನ್ನಿ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಎಷ್ಟು ಸಮಯ ಕೊಡುತ್ತೀರಿ ಎಂದರೆ ಹೇಳಿದರೆ ಅದರ ಮೇಲೆ ಮಾತನಾಡುತ್ತೇನೆ.

ಅಧ್ಯಕ್ಷರು: ತಾವು 6 ಗಂಟೆಯೊಳಗೆ ಮಾತನಾಡುವುದನ್ನು ಪೂರೈಸಬೇಕು. ಈಗ 5.30 ಗಂಟೆ ಆಗಿದೆ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಕೃಷ್ಣಾ ಬಗ್ಗೆ ಮಾತನಾಡುವಾಗಲೆಲ್ಲಾ 15 ನಿಮಿಷ ಕೊಡುವುದರಿಂದ ಅನೇಕ ಜನರಿಗೆ ಕೃಷ್ಣಾ ಬೇಸಿನ್ ಎಂದರೆ ಏನೂ ಗೊತ್ತಿಲ್ಲ. ಪ್ರತಿ ಅಧಿವೇಶನದಲ್ಲಿ ಕೃಷ್ಣಾ ಬೇಸಿನ್ ಬಗ್ಗೆ ಚರ್ಚೆ ಎಂದು ಹೇಳುತ್ತಾರೆ. ಅದು ಅದರ ಬಗ್ಗೆ ಸರಿಯಾಗಿ ಚರ್ಚೆಯೇ ಆಗುತ್ತಿಲ್ಲ. ಅದಕ್ಕಾಗಿ ಮಾತನಾಡಲು ಹೆಚ್ಚು ಸಮಯ ಕೊಟ್ಟರೆ ಅನುಕೂಲ.

ಅಧ್ಯಕ್ಷರು: ಬಜೆಟ್ ಮೇಲೆ ಮಾತನಾಡುವಾಗ ನೀವು ಏಕೆ ಮಾತನಾಡಲಿಲ್ಲ?

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಆಗಲೂ ಕೇವಲ 15 ನಿಮಿಷ ಕೊಟ್ಟಿದ್ದಾರೆ ಅಷ್ಟೆ. ಬೇಕಾದರೆ ಮಾನ್ಯ ಉಪಾಧ್ಯಕ್ಷರನ್ನು ಕೇಳಿ. 3.00 ಗಂಟೆ ಮಾತನಾಡಲು ಸಮಯಾವಕಾಶ ಕೊಡಿ ಎಂದು ಕೇಳಿದ್ದೆ. ಒಂದು ಬಾರಿ ಮಾತನಾಡಲು ಅವಕಾಶ ಕೊಟ್ಟುಬಿಡಿ. ಮೂರು ವರ್ಷ ಮಾತನಾಡುವುದಿಲ್ಲ.

ಅಧ್ಯಕ್ಷರು: ಆಯಿತು, ರಾತ್ರಿ 11.00 ಗಂಟೆಯವರೆಗೂ ಕುಳಿತುಕೊಳ್ಳೋಣ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ರಾತ್ರಿ 11.00 ಗಂಟೆಯವರೆಗೂ ಬೇಡ.

ಅಧ್ಯಕ್ಷರು: ಆಯಿತು, ಬೇಗ ಮಾತನಾಡಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ಕರ್ನಾಟಕ ರಾಜ್ಯಕ್ಕೆ ಕೃಷ್ಣಾ ನದಿ ಬಹಳ ಪ್ರಮುಖವಾದಂತಹ ನದಿ. ಕೃಷ್ಣಾ ನದಿಗೆ ಸ್ವಾತಂತ್ರ್ಯ ಪೂರ್ವದಲ್ಲಿಯೇ ನೀರಾವರಿ ಯೋಜನೆಗಳನ್ನು ಆಂಧ್ರ ಪ್ರದೇಶದಲ್ಲಿ, ಮಹಾರಾಷ್ಟ್ರದಲ್ಲಿ ಅನೇಕ ಕಡೆ ಮಾಡಿದ್ದಾರೆ. ಆದರೆ ಕರ್ನಾಟಕದವರು ನಾವು ಆ ಸಂದರ್ಭದಲ್ಲಿ ಮಾಡಲಿಲ್ಲ, ಯಾವಾಗ ರಾಜ್ಯಗಳ ಪುನರ್‌ವಿಂಗಡನೆ ಆಯಿತು, ಆಗ ಹೈದರಾಬಾದ್–ಕರ್ನಾಟಕಕ್ಕೆ ಸೇರಿದ ರಾಯಚೂರು, ಗುಲ್ಬರ್ಗಾ ಜಿಲ್ಲೆ ಮತ್ತು ಮುಂಬಯಿ ಭಾಗಕ್ಕೆ ಸೇರಿರತಕ್ಕಂತ ಬಿಜಾಪುರ ಭಗದ ಎಲ್ಲಾ ಜಿಲ್ಲೆಗಳು ಸೇರಿ ಒಂದು ರಾಜ್ಯ ಆದಮೇಲೆ ಅಲ್ಲಿ ಕೃಷ್ಣಾ ನದಿಯ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೋಸ್ಕರವಾಗಿ, ನಾನು ಪ್ರಮುಖವಾಗಿ ಕೃಷ್ಣಾ ಬೇಸಿನ್ ಬಗ್ಗೆ ಮಾತನಾಡುವುದನ್ನು ಬಿಟ್ಟುಬಿಡುತ್ತೇನೆ. ನೇರವಾಗಿ Upper Krishna Project ಬಗ್ಗೆ ಬರುತ್ತೇನೆ. ಇದರಲ್ಲಿ ಕೃಷ್ಣಾ ನದಿ ಪ್ರಮುಖವಾಗಿರುವಂತಹ ನದಿಗೆ ಉತ್ತರಾಭಿಮುಖವಾಗಿ ಹರಿಯುವಂತಹ ಭೀಮಾ ನದಿ ಮತ್ತು ದಕ್ಷಿಣಾಭಿಮುಖವಾಗಿ ಹರೆಯುವಂತಹ ಘಟಪ್ರಭಾ, ಮಲಪ್ರಭಾ, ತುಂಗಭದ್ರಾ ಮತ್ತು ವೇದಾವತಿ ಈ ಐದು ನದಿಗಳು ಅದರ ಜೊತೆಗೆ ಕೃಷ್ಣಾ ನದಿ ಆರು ನದಿಗಳು ಪ್ರಮುಖವಾಗಿ ಕೃಷ್ಣಾ ಬೇಸಿನ್‌ನಲ್ಲಿ ಬರುತ್ತದೆ. ನಾನು ಐದು ನದಿಗಳ ಬಗ್ಗೆ ಮಾತನಾಡಲು ಹೋಗುವುದಿಲ್ಲ.

ಏಕೆಂದರೆ ತಾವು ಮಾತನಾಡಲು ಸಮಯಾವಕಾಶ ಕೊಡಲು ತಯಾರಿಲ್ಲ. ಅದಕ್ಕಾಗಿ ನಾನು ಪ್ರಮುಖವಾಗಿ Upper Krishna Project ಬಗ್ಗೆ ಮಾತನಾಡುತ್ತೇನೆ. ಕೃಷ್ಣಾ ಮೂಲ ನದಿಗೆ ಏನು ನೀರು ಹರಿದು ಬರುತ್ತದೆ, ಅದರ ಮೂಲ ಹುಟ್ಟುವುದು ಮಹಾರಾಷ್ಟ್ರದಲ್ಲಿ. ಯಾವ ಆಧಾರದ ಮೇಲೆ ಎಂದರೆ ಮಳೆ ಆಧಾರದ ಮೇಲೆ ಬರುತ್ತದೆ. ಆ ಕೃಷ್ಣಾ ನದಿ ಯಾವಾಗ ಹರಿದು ಬರುತ್ತದೆ ಎಂದರೆ, ಜೂನ್‌ನಲ್ಲಿ ಪ್ರಾರಂಭವಾಗುತ್ತದೆ. ಜುಲೈನಲ್ಲಿ ಸ್ವಲ್ಪ ಜೋರಾಗುತ್ತದೆ. ಆಗಸ್ಟ್‌ನಲ್ಲಿ flood ಬರುತ್ತದೆ. ಸೆಪ್ಟೆಂಬರ್‌ಗೆ close ಆಗುತ್ತದೆ. ಅಕ್ಟೋಬರ್‌ನಲ್ಲಿ ಸಂಪೂರ್ಣವಾಗಿ ನಿಂತು ಹೋಗುತ್ತದೆ. ಏಕೆ ಈ ವಿಷಯವನ್ನು ಮೊದಲಿಗೆ ಸಂಕ್ಷಿಪ್ತವಾಗಿ ಹೇಳುತ್ತಿದ್ದೇನೆಂದರೆ, ಈ ಕೃಷ್ಣಾ ನದಿಯ ನೀರಿನ ಹಂಚಿಕೆಯಾಗಬೇಕೆಂದು ಬಚಾವತ್ ಆಯೋಗದ ತೀರ್ಪು . . .

ಅಧ್ಯಕ್ಷರು: ನೀವು relevant ಆಗಿ ಮಾತನಾಡಿ. 173 ಟಿ.ಎಂ.ಸಿಯಲ್ಲಿ ಕನಿಷ್ಠ 105 ಟಿ.ಎಂ.ಸಿ. ನೀರನ್ನು ಅವಳಿ ಜಿಲ್ಲೆಗೆ ಮರುಹಂಚಿಕೆ ಮಾಡಬೇಕೆಂದು ಹೇಳುತ್ತೀರಿ, ಅಷ್ಟಕ್ಕೆ ಸೀಮಿತವಾಗಿ ಮಾತನಾಡಿ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಏಕೆ ಎನ್ನುವುದನ್ನು ಹೇಳಬೇಕಾಗುತ್ತದೆ. ಹಾಗೆಯೇ ನೀರನ್ನು ಕೊಟ್ಟುಬಿಡುತ್ತಾರಾ? ಏಕೆ ನಾವು ಕೇಳುತ್ತಿದ್ದೇವೆ ಎನ್ನುವುದಕ್ಕೆ ಇಲ್ಲಿ ನಾನು ಒತ್ತಾಯ ಮಾಡುತ್ತಿದ್ದೇನೆ. ಬಚಾವತ್ ತೀರ್ಪಿನಲ್ಲಿ 173 ಟಿ.ಎಂ.ಸಿ ನೀರನ್ನು ಕೃಷ್ಣಾ ನದಿಯಲ್ಲಿ ಬಳಸಿಕೊಳ್ಳಬೇಕೆಂದು ನಮಗೆ ತೀರ್ಪು ಕೊಟ್ಟರು. ಆ ನೀರು ಯಾವಾಗ ಬರುತ್ತದೆ? ಇಲ್ಲಿ ಬಹಳ ಪ್ರಮುಖವಾದ ಅಂಶ ಇದೆ. ಏಕೆಂದರೆ ಬಹಳ ಜನ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಆದರೆ ಬಚಾವತ್ ತೀರ್ಪಿನಲ್ಲಿ ಬಂದಿರುವಂತಹ ನೀರನ್ನು ಏನು ಅಲಾಟ್ ಮಾಡಿದ್ದಾರೆ, ಅದು ಜೂನ್, ಜುಲೈ, ಆಗಸ್ಟ್ 15 ರೊಳಗೆ 173 ಟಿ.ಎಂ.ಸಿ. ನೀರು ಬರುತ್ತದೆ. ಈಗ ಏನು 2ನೇ ತೀರ್ಪು ಬಂದಿದೆ, ಮೊನ್ನೆ ಏನು ಬ್ರಿಜೇಶ್ ಕುಮಾರ್‌ರವರ ತೀರ್ಪು ಬಂದಿದೆ, ಅದು surplus water ಅಂದರೆ ಹೆಚ್ಚುವರಿ ನೀರು. ಆ ಹೆಚ್ಚುವರಿ ನೀರನ್ನು ಯಾವಾಗ ನಮಗೆ ಶೇಖರಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆ ಅಂದರೆ, ಒಂದು ವೇಳೆ ಹೆಚ್ಚು

ಮಳೆಯಾದರೆ ಆಗಸ್ಟ್ 15ನೇ ತಾರೀಖಿನ ನಂತರ September up to October 15th ಮಾತ್ರ. ಇಲ್ಲಿ ಸಮಸ್ಯೆ ಏನಾಗಿದೆ ಎಂದರೆ, 173 ಟಿಎಂಸಿ ನೀರು ಎಂದು ಬಚಾವತ್ ತೀರ್ಪಿನಲ್ಲಿ ಏನಿದೆ, ಅದನ್ನು ನಾವು ಈಗಾಗಲೇ project-wise allot ಮಾಡಿಬಿಟ್ಟಿದ್ದೇವೆ. ಈಗ 2ನೇ ತೀರ್ಪು ಬಂದಿದೆ, 130 ಟಿಎಂಸಿ ನೀರು ಅದರಲ್ಲಿ ನಮಗೆ ಸಿಕ್ಕಿದೆ. ಆದರೆ, 130 ಟಿಎಂಸಿ ನೀರಿನ ತೀರ್ಪು ಬಂದಂಥ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ಒಂದು appeal ಹಾಕಿತು. Appeal ಏನು ಹಾಕಿದರೆಂದರೆ, 2ನೇ ತೀರ್ಪಿನಲ್ಲಿ ಏನು ಬಂದಿದೆ, ಆ ಬಂದಿರತಕ್ಕಂಥ ನೀರನ್ನು ನಾವು ಮುಂಗಾರಿನಲ್ಲಿ ಬಳಸಿಕೊಳ್ಳಲಿಕ್ಕೆ ಸಾಧ್ಯವಿದೆಯೇ ಎಂಬುದನ್ನು ಬ್ರಿಜೇಶ್ ಕುಮಾರ್ ಆಯೋಗದ ಮುಂದೆ ಸ್ಪಷ್ಟೀಕರಣ ಕೇಳಿದ್ದಾರೆ. ನ್ಯಾಯಾಧೀಶರು ಬಹಳ ಸ್ಪಷ್ಟವಾಗಿ ಏನು ಹೇಳುತ್ತಾರೆಂದರೆ, ಇದು ಆಗಸ್ಟ್ 15ನೇ ತಾರೀಖಿನ ಮೇಲೆ ನೀರಿನ ಸಂಗ್ರಹಣೆ ಆಗುವುದರಿಂದ ಮುಂಗಾರು ಹಂಗಾಮು ಜೂನ್, ಜುಲೈ ತಿಂಗಳಲ್ಲಿ ಪ್ರಾರಂಭವಗುವುದರಿಂದ ಬ್ರಿಜೇಶ್ ಕುಮಾರ್ ಆಯೋಗದ ತೀರ್ಪಿನಲ್ಲಿ ಬರತಕ್ಕಂಥ ಹೆಚ್ಚುವರಿ 177 ಟಿಎಂಸಿ ನೀರು ಏನಿದೆ, ಅದರಲ್ಲಿ ಕೃಷ್ಣಾ ಬೇಸಿನ್‌ಗೆ ಬಂದಿರತಕ್ಕಂಥ 130 ಟಿಎಂಸಿ ನೀರನ್ನು ನೀವು ಮುಂಗಾರಿಗೆ ಬಳಸಿಕೊಳ್ಳತಕ್ಕಂಥ ಪ್ರಶ್ನೆಯೇ ಇಲ್ಲ, ಅದನ್ನು ಕೇವಲ ಹಿಂಗಾರು ಬೆಳೆಗೆ ಮಾತ್ರ ಬಳಸಿಕೊಳ್ಳಬೇಕೆಂದು ಆದೇಶ ಮಾಡುತ್ತಾರೆ. ಇಲ್ಲಿಯೇ ನಮಗೆ ಸಮಸ್ಯೆ ಬಂದಿರುವುದು. Upper Krishna Project ನ 3ನೇ ಹಂತದ ಯೋಜನೆಗಳನ್ನು ಹಿಂಗಾರಿಗೆ ಬಳಸಿಕೊಳ್ಳಬೇಕೆಂದು ಏನು ಹೇಳಿದ್ದಾರಲ್ಲ, ಅ ಯೋಜನೆಗಳು ಎಲ್ಲಿ ಬರುತ್ತವೆ? ಇದು ಬಹಳ ಮುಖ್ಯ. ಅದರಲ್ಲಿ ಬಿಜಾಪುರ, ಬಾಗಲಕೋಟೆ, ಕೊಪ್ಪಳ, ರಾಯಚೂರು ಈ ಮೂರು ಜಿಲ್ಲೆಗಳಲ್ಲಿ ಏನು ಕೃಷ್ಣಾ ನದಿಯಿಂದ ನೀರಾವರಿ ಯೋಜನೆಗಳು ಆಗಬೇಕಾಗಿದೆ, ಅದನ್ನು ನಾವು ಮುಂಗಾರಿಗೆ ಬಳಸಿಕೊಳ್ಳಲು ಬರುವುದಿಲ್ಲ, ಕೇವಲ ಹಿಂಗಾರು ಬೆಳೆಗೆ ಮಾತ್ರ ಬಳಸಿಕೊಳ್ಳಬೇಕೆನ್ನುವ condition ಹಾಕಿದ್ದಾರೆ. ಇದರ ಬಗ್ಗೆ ಕಾನೂನು ತಜ್ಞರು, ಮಂತ್ರಿಗಳು ಸಭೆಯನ್ನು ಕರೆದಿದ್ದರು. ನಾನೂ ಕೂಡ ಆ ಸಭೆಯಲ್ಲಿ ಇದ್ದೆ. But, ಎಲ್ಲಿಯೂ ಕೂಡ ಈ ತೀರ್ಪುಗಳಲ್ಲಿ project-wise allot ಮಾಡಿ

ತೀರ್ಪು ಕೊಟ್ಟಿಲ್ಲ. ಬಚಾವತ್ ತೀರ್ಪಿನಲ್ಲಿ 173 ಟಿಎಂಸಿ ನೀರನ್ನು en-block ಆಗಿ allot ಮಾಡಿದ್ದಾರೆ. ನೀವು ಹೇಗೆ ಬೇಕಾದರೂ ಬಳಸಿಕೊಳ್ಳಬಹುದು, ಯಾವುದಕ್ಕಾದರೂ ಬಳಸಿಕೊಳ್ಳಬಹುದು. ಅದೇ ರೀತಿಯಾಗಿ ಬ್ರಿಜೇಶ್ ಕುಮಾರ್ ವರದಿಯಲ್ಲೂ ಕೂಡ 177 ಟಿಎಂಸಿ ನೀರಿನಲ್ಲಿ 130 ಟಿಎಂಸಿ ನೀರನ್ನು ಏನು allot ಮಾಡಿದ್ದಾರೆ, ಅದನ್ನೂ ಕೂಡ en-block ಆಗಿ allot ಮಾಡಿದ್ದಾರೆ. ಅಂದರೆ ಅದರ ಅರ್ಥ ಏನಾಯಿತು? 173+130 total 303 TMC ನೀರನ್ನು ನಾರಾಯಣಪುರ ಮತ್ತು Alamatti dam ನ ಮುಖಾಂತರ ಬಳಸಿಕೊಳ್ಳುವುದಕ್ಕೆ ಹೊರಟ್ಟಿದ್ದಾರೆ, that is allotted en-block. ಎಲ್ಲೂ ಕೂಡ project-wise ಇಷ್ಟೇ ನೀರನ್ನು ಬಳಸಿಕೊಳ್ಳಬೇಕೆಂದು ಹೇಳಿಲ್ಲ. ಆ project-wise specific ಆಗಿ allot ಮಾಡಿರುವುದು ಯಾರೆಂದರೆ ನಮ್ಮ ಸರ್ಕಾರ ಮಾಡಿರುವುದು. ಕರ್ನಾಟಕ ರಾಜ್ಯ ಸರ್ಕಾರ project-wise allot ಮಾಡಿ ನಾವು ಇವತ್ತು ಅದರ ಮುಂದೆ ಕೊಟ್ಟಿದ್ದೇವೇನೋ, ಆಯೋಗದ ಮುಂದೆ ಕೊಟ್ಟಿದ್ದೇವೆ. ಈಗ ಸಮಸ್ಯೆ ಏನಾಗಿದೆ ಎಂದರೆ, ಬ್ರಜೇಶ್ ಕುಮಾರ್ ವರದಿಯಲ್ಲಿ ಬಂದಿರತಕ್ಕಂಥ 130 ಟಿಎಂಸಿ ನೀರನ್ನು ಮುಂಗಾರಿಗೆ ಬಳಸಿಕೊಳ್ಳುವುದಕ್ಕಾಗುವುದಿಲ್ಲ, ಹಿಂಗಾರಿಗೆ ಬಳಸಿಕೊಳ್ಳಬೇಕೆಂದು ಹೇಳಿದಾಗ ಬಿಜಾಪುರ, ಬಾಗಲಕೋಟೆ, ಕೊಪ್ಪಳ ಮತ್ತು ರಾಯಚೂರು ಭಾಗದಲ್ಲಿ B scheme ನಲ್ಲಿ allot ಆಗಿರುವ ನೀರಿನ ಕಾಲುವೆಗಳನ್ನು ಏನು ಮಾಡುತ್ತಿದ್ದಾರೆ, ಅಲ್ಲಿ ನಾವು ಎರಡೂ ಬೆಳೆಗಳನ್ನು ಬೆಳೆಯುವುದಕ್ಕೆ ಕಾಲುವೆಗಳ projects ಅನ್ನು ಮಾಡಿದ್ದೇವೆ. ಸರ್ಕಾರ, ನಾವು ಇಲ್ಲಿ ಸೂಕ್ಷ್ಮವಾಗಿ ಏನು ತೀರ್ಮಾನ ತೆಗೆದುಕೊಳ್ಳಬೇಕೆಂದರೆ, A scheme, B scheme ಎನ್ನುವುದನ್ನು ತೆಗೆದುಹಾಕಿ. ಬಚಾವತ್ ತೀರ್ಪಿನಲ್ಲಿ ಏನು 173 ಟಿಎಂಸಿ ನೀರು ಬಂದಿದೆ, ಅದೆಲ್ಲವೂ ಮುಂಗಾರು ಬೆಳೆಗೆ ಮರು ಹಂಚಿಕೆ ಆಗಬೇಕು. ಮುಂಗಾರು ಬೆಳೆಗೆ ಕೊಡುವುದಕ್ಕೆ ಕಾನೂನಿನಲ್ಲಿ ಯಾವುದೇ ತೊಂದರೆ ಇಲ್ಲ. ಅದಾದ ನಂತರ B scheme ನಲ್ಲಿ allot ಆಗಿರತಕ್ಕಂಥ 130 TMC ನೀರು ಏನಿದೆ, ಆ ನೀರು ಹಿಂಗಾರು ಬೆಳೆಗೆ ಎಲ್ಲರಿಗೂ ಹಂಚಿಕೆಯಾಗಬೇಕು. ಅವಾಗ ಮಾತ್ರ A scheme ಮತ್ತು B scheme ನಲ್ಲಿ

ಬಂದಿರತಕ್ಕಂಥ ಜಿಲ್ಲೆಗಳು ಯಾವುದು ಇದೆ, Central Government Irrigation Commission ಪ್ರಕಾರ report ತೆಗೆದುಕೊಂಡರೆ even British ರ ಕಾಲದಿಂದಲೂ ಹೇಳುತ್ತಾರೆ, ರಾಯಚೂರು, ಗುಲಬರ್ಗಾ, ಅಖಂಡ ಬಿಜಾಪುರ ಜಿಲ್ಲೆ, ಬಾಗಲಕೋಟೆ, ಬಿಜಾಪುರ, ಧಾರವಾಡದ 4 ತಾಲ್ಲೂಕುಗಳು ಇವು ಇಡೀ ದೇಶದಲ್ಲಿ highest drought-prone areas ಎಂದು ಇವತ್ತೂ ಕೂಡ documents ಇವೆ. ನನಗೆ time ಕೊಟ್ಟಿದ್ದರೆ ನಾನು ಒಂದೊಂದೇ ಓದಿ ಹೇಳುತ್ತಿದ್ದೆ. ಆದರೆ, ನನಗೆ time ಕೊಡದೇ ಇದ್ದಿದ್ದಕ್ಕೆ ನಾನು ಸಂಕ್ಷಿಪ್ತವಾಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು: ಪಾಟೀಲರೆ, ನೀವು ಹೀಗೆ argument ಮಾಡಿ. allot ಆಗಿರುವ 173 TMC ನೀರಿನಲ್ಲಿ ಎರಡೂ ಜಿಲ್ಲೆಗಳಿಗೆ 105 TMC ನೀರನ್ನು ಕೊಡಬೇಕೆಂದು ನೀವು ಹೇಳುತ್ತಿದ್ದೀರಿ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಹೌದು ಅಧ್ಯಕ್ಷರೆ.

ಅಧ್ಯಕ್ಷರು: ಏತಕ್ಕಾಗಿ ಎನ್ನುವುದನ್ನು ಹೇಳಿ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಮಾನ್ಯ ಅಧ್ಯಕ್ಷರೆ, ಅದನ್ನೇ ಹೇಳುವುದಕ್ಕೆ ಹೊರಟ್ಟಿದ್ದೇನೆ. Major Irrigation projects ಬರುತ್ತಿರುವುದೇ, ಈಗ ನಾನು project-wise ಹೇಳುತ್ತೇನೆ. ತಾವು ನನಗೆ ಅವಕಾಶ ಕೊಟ್ಟರೆ project-wise ಹೇಳುತ್ತೇನೆ. Upper Krishna stage–1 ಮತ್ತು stage–2ರಲ್ಲಿ allot ಮಾಡಿದೆ. ಅದರಲ್ಲಿ ನಮ್ಮ ಅವಳಿ ಜಿಲ್ಲೆಯಲ್ಲಿ ಬರುವ ಯೋಜನೆಗಳಲ್ಲಿ 170 TMC ನೀರು ಬರುತ್ತದೆ. ಆ 170 ಟಿಎಂಸಿ ನೀರಿನಲ್ಲಿ ನಮಗೆ ಕೊಟ್ಟಿರುವಂಥದ್ದು ಕೇವಲ 23 TMC ನೀರು ಮಾತ್ರ. ನಮ್ಮ ಅವಳಿ ಜಿಲ್ಲೆಗೆ ಈಗ ಏಕೆ ಮರುಹಂಚಿಕೆ ಮಾಡಬೇಕೆಂದು ಕೇಳುತ್ತೇವೆಂದರೆ, Mumbai Presidency Rule ಇದ್ದಾಗ, ಹಿಂದೆ ಬ್ರಿಟಿಷರು ಆಳುತ್ತಿದ್ದಾಗ ನಾವು ಕೊನೆಯಲ್ಲಿ ಇದ್ದೆವು, ಆವಾಗ ಅವರೂ ನಮ್ಮನ್ನು ನೋಡಲಿಲ್ಲ. ಬಳಿಕ ರಾಜ್ಯದ ಮರುಹಂಚಿಕೆ ಆದಮೇಲೆ ಈಗ ಹೈದರಾಬಾದ್–ಕರ್ನಾಟಕ ಮತ್ತು ಮುಂಬೈ–ಕರ್ನಾಟಕದ boundary ಯಲ್ಲಿ ನಾವು ಬರುತ್ತೇವೆ. ಆ boundary

ಯಲ್ಲಿ ನಾವು ಇವತ್ತು dam ಕಟ್ಟಿದ್ದೇವೆ, ಹೈದರಾಬಾದ್-ಕರ್ನಾಟಕದ ಕೆಲವು ಭಾಗಗಳಲ್ಲಿ ನೀರಾವರಿ ಮಾಡಿದ್ದೇವೆ, ನಮಗೆ highest drought-prone area ಇದ್ದರೂ ಕೂಡ ಇವತ್ತು ಮೊದಲ ಆದ್ಯತೆಗೆ ಮೇರೆಗೆ, ಮೊದಲ ಪ್ರಾಶಸ್ತ್ಯದ ಮೇರೆಗೆ ಅಲ್ಲಿ ಏನು irrigation project ತೆಗೆದುಕೊಳ್ಳಬೇಕಾಗಿತ್ತು, ಅದನ್ನು ಇವತ್ತಿಗೂ ಯಾವುದೇ ಸರ್ಕಾರಗಳು ತೆಗೆದುಕೊಳ್ಳಲಿಲ್ಲ. ಇಲ್ಲಿಗೆ B scheme ನಲ್ಲಿ ಕೊಡುತ್ತೇವೆಂದು ಇಲ್ಲಿಯವರೆಗೆ ಹೇಳಿಕೊಂಡು ಬಂದರು. ಈಗ B scheme ಬಂದಿದೆ. ನಮಗೆ B scheme ನಲ್ಲಿ ಮುಂಗಾರು ಬೆಳೆಗೆ ನೀರು ಕೊಡುವುದಿಲ್ಲವೆಂದು ಹೇಳುತ್ತಾರೆ. ಇಲ್ಲಿ ಬಹಳ ವ್ಯವಸ್ಥಿತವಾದ ಸಂಚು ಕೂಡ ನಡೆದಿದೆ. ಆ ಭಾಗದ ರೈತರಿಗೆ ಹಂಚಿಕೆಯಾಗಿರತಕ್ಕಂಥ ನೀರನ್ನು ವ್ಯವಸ್ಥಿತವಾಗಿ ಕೈಗಾರಿಕೆಗಳಿಗೆ ಹಂಚತಕ್ಕಂಥ ಸಂಚು ಕೂಡ ಇಲ್ಲಿ ನಡೆದಿದೆ. ಅದಕ್ಕೋಸ್ಕರ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ, ಬಚಾವತ್ ತೀರ್ಪಿನಲ್ಲಾಗಲಿ, ಬ್ರಿಜೇಶ್ ಕುಮಾರ್ ಆಯೋಗದ ತೀರ್ಪಿನಲ್ಲಾಗಲಿ industries ಎಲ್ಲಿಯೂ ಕೂಡ water allocation ಮಾಡಿಲ್ಲ. ಆದರೆ, ನಮ್ಮನ್ನು ಆಳಿದಂಥ ಸರ್ಕಾರಗಳು already 16.72 TMC ನೀರನ್ನು ಕೊಡಿಗಿ ವಿದ್ಯುತ್ ಕೇಂದ್ರಕ್ಕೆ, 5.2 TMC, R.M. Steels Koppal 2.19 TMC, Xindia Steels Limited 1.03 TMC, Jindal Steel 2.63 TMC, ಕೊಪ್ಪಳ ಹಾಗೂ ಹೊಸಪೇಟೆಯಲ್ಲಿ Steel Industry ಗಳನ್ನು ಸ್ಥಾಪಿಸಲು 3.15 TMC, ಬಳ್ಳಾರಿ Thermal power Station 2.34 TMC, ಸಕ್ಕರೆ ಕಾರ್ಖಾನೆಗಳು ಮತ್ತು ಇತರರಿಗೆ 0.1 TMC, total 16.76 TMC already allot ಮಾಡಿದ್ದಾರೆ. ಅದರ ಜೊತೆಯಲ್ಲಿ ಇನ್ನೂ projects ಗೆ planned, ಇನ್ನೂ demand ಇರುವುದು 15.96 TMC ಅಂದರೆ ಒಟ್ಟು 32.178 TMC ನೀರನ್ನು ಅಂದರೆ, ಇವತ್ತು ನಾವು ಏನು ಮುಂಗಾರು ಬೆಳೆಗೆ ನೀರನ್ನು ಬಳಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ ಎಂದು condition ಹಾಕಿದ್ದಾರೆ, ಆ ನೀರನ್ನು ಇವರು ಎಲ್ಲಿಗೆ ಹಂಚಿಕೆ ಮಾಡುತ್ತಾರೆ? Now it is going to the Industry. ಆ ಭಾಗದ ಜನ ತಾವು ಎರಡೂವರೆ ಲಕ್ಷ ಎಕರೆ ಭೂಮಿ ಕಳೆದುಕೊಂಡಿದ್ದೇವೆ, 196 ಹಳ್ಳಿಗಳನ್ನು ಮುಳುಗಿಸಿಕೊಂಡಿದ್ದೇವೆ. ಮೂರುವರೆ ಲಕ್ಷ ಜನರು ಕೂಲಿ ಮಾಡುವುದಕ್ಕೆ

ಬೆಂಗಳೂರಿಗೆ, ಗೋವಾಕ್ಕೆ, ಮುಂಬೈಗೆ ಗುಳೆ ಹೋಗಿದ್ದೇವೆ. ಈಗ ಪುನಃ ಆ dam ನ್ನು ಏರಿಸಿದರೆ ಮತ್ತೆ 1 ಲಕ್ಷ ಎಕರೆ ಭೂಮಿ ಮುಳುಗುತ್ತದೆ, 22 ಹಳ್ಳಿಗಳು ಮುಳುಗುತ್ತವೆ, ಬಾಗಲಕೋಟೆಯ ಸ್ವಲ್ಪ ನಗರ ಮತ್ತೆ ಮುಳುಗುತ್ತದೆ, ಆದರೆ ನಮಗೆ ಎಲ್ಲಿ ನೀರಿದೆ? ನಮ್ಮ ಅವಳಿ ಜಿಲ್ಲೆಗೆ ನೀವು ಎಲ್ಲಿ ಶಾಶ್ವತ ನೀರಾವರಿಯನ್ನು ಕೊಡುತ್ತೀರಿ? ಆದ್ದರಿಂದ, ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, A scheme, B scheme ಎನ್ನುವುದನ್ನು ತೆಗೆದುಹಾಕಿ, ಒಟ್ಟು 303 TMC ನೀರು ನಾರಾಯಣಪುರ ಮತ್ತು ಆಲಮಟ್ಟಿ dam ನಲ್ಲಿ ನಮಗೆ ಏನು ಸಿಕ್ಕಿದೆ, ಅದರಲ್ಲಿ ಎಲ್ಲರಿಗೂ ಕೂಡ ಸಮಾನವಾಗಿ ಮೊದಲು ಮುಂಗಾರು ಬೆಳೆಗೆ ಹಂಚತಕ್ಕಂಥ ಕೆಲಸ ಮಾಡಿ. ನಂತರ ಹಿಂಗಾರು ಬೆಳೆಗೆ ಬ್ರಿಜೇಶ್ ಕುಮಾರ್ ವರದಿ ಪ್ರಕಾರ ಏನು ನೀರು ಬಂದಿದೆ, ಅದನ್ನು ಹಂಚಿಕೆ ಮಾಡಿ, ಆಮೇಲೆ ಬೇಕಾದರೆ ನೀವು industries ಗೆ ನೀರು ಕೊಡಿ. ಅಲ್ಲಿರತಕ್ಕಂಥ ನಾವು ಭೂಮಿ ಕಳೆದುಕೊಂಡಿದ್ದೇವೆ, ಎಲ್ಲಾ ಕಳೆದುಕೊಂಡಂಥ ನಮಗೂ ಕೂಡ ಮುಚ್ಚಿಟ್ಟು ಇದರ ತೀರ್ಮಾನ ತೆಗೆದುಕೊಳ್ಳಬೇಕಾದರೆ ಕನಿಷ್ಠ ಅಲ್ಲಿರುವ ಶಾಸಕರ ಗಮನಕ್ಕೆ ತರಬೇಕು. ಅಲ್ಲಿರುವ ಜನರ ಬಗ್ಗೆಯೂ ಕೂಡ ಯೋಚನೆ ಮಾಡಬೇಕು. ಮಾನ್ಯ ಅಧ್ಯಕ್ಷರೆ, ಮೊದಲು ನಾವು ಹಣ ಲೂಟಿ ಹೊಡೆಯುವವರನ್ನು ನೋಡಿದ್ದೇವು, ಹಿಂದೆ ಭೂಮಿ ಲೂಟಿ ಹೊಡೆಯುವವರನ್ನು ನೋಡಿದ್ದೆವು, ಆದರೆ, ಈಗ ಕೈಗಾರಿಕೆಗಳನ್ನು ನಡೆಸುವವರ ಜೊತೆ ಶಾಮೀಲಾಗಿ ರೈತರಿಗೆ ಹಂಚಿಕೆಯಾಗಿರುವ ನೀರನ್ನು ಕೂಡ ಲೂಟಿ ಹೊಡೆಯತಕ್ಕಂಥವರನ್ನು ಇವತ್ತು ನಾವು ನೋಡುತ್ತಿದ್ದೇವೆ. ಈ ರಾಜ್ಯದಲ್ಲಿ ಇದು ನಿಲ್ಲಬೇಕು. ಈ ರಾಜ್ಯದಲ್ಲಿ ಎಲ್ಲಿ ರೈತರು ನಿಜವಾಗಿಯೂ ಬರಗಾಲದಲ್ಲಿ ನೋವನ್ನು ಅನುಭವಿಸುತ್ತಿದ್ದಾರೆ, ಅವರಿಗೆ ನೀರಿನ ಮರು ಹಂಚಿಕೆಯಾಗಬೇಕು. ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡುತ್ತೇನೆ. ಇದಕ್ಕೆ ಯಾವುದೇ ರೀತಿಯಾದಂಥ ಕಾನೂನು ತೊಡಕಿಲ್ಲ ಅಧ್ಯಕ್ಷರೆ, ಕಾನೂನು ತೊಡಕಿದ್ದರೆ ಬೇರೆ? 173 ಟಿಎಂಸಿ ನೀರನ್ನು ನೀವು ಮುಂಗಾರು ಬೆಳೆಗೆ ಹಂಚಿಕೆ ಮಾಡಬಹುದು, ಇದರಲ್ಲಿ ಯಾವುದೇ ರೀತಿಯ

ತೊಂದರೆಯಾಗಿಲ್ಲ. ಅದಕ್ಕೆ ದಯಮಾಡಿ ನಾನು ನನ್ನ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ, ಮಾನ್ಯ ಸಚಿವರೂ ಸಹ ನಮ್ಮ ಜಿಲ್ಲೆಯವರೇ ಆಗಿದ್ದಾರೆ. ನಮ್ಮ ಜಿಲ್ಲೆಗೆ ನ್ಯಾಯ ಕೊಡಬೇಕಾದುದು ನೈತಿಕವಾಗಿ ನಿಮ್ಮ ಜವಾಬ್ದಾರಿಯಾಗಿದೆ. ಅದಕ್ಕೆ ನಾನು ವಿನಂತಿ ಮಾಡುತ್ತೇನೆ, ಇನ್ನು ಮೇಲೆ ಈ ರೀತಿ ಏನು ಹಂಚಿಕೆ ಮಾಡಿರುವಿರಿ, ಹಿಂದಿನ ಸರ್ಕಾರಗಳು ಏನು ಹಂಚಿಕೆ ಮಾಡಿವೆ, ಅವೆಲ್ಲವೂ ಕೂಡ ವಿಧಾನಸಭೆಯಲ್ಲಿ ಚರ್ಚೆಯಾಗಬೇಕು. ಒಂದು ಕಡೆ 32 ಟಿಎಂಸಿ ನೀರು ಯಾರ್ಯಾರು demand ಇಟ್ಟಿದ್ದಾರೆ, ಯಾರ್ಯಾರು ಕೊಟ್ಟಿದ್ದಾರೆ, ಯಾರು ಆ orders ಗೆ sign ಮಾಡಿದ್ದಾರೆ, ಅದು ಬರಬೇಕು. ಅದರ ಜೊತೆಗೆ ಆಂಧ್ರ ಪ್ರದೇಶದ ಪೋಲಾವರಂ ತಿರುವಿನಲ್ಲಿ 23 ಟಿಎಂಸಿ ನೀರನ್ನು ಹೆಚ್ಚುವರಿಯಾಗಿ 2012 ರಲ್ಲಿ ಉಪಯೋಗ ಮಾಡಿಕೊಂಡಿತ್ತು. ಅದನ್ನು ಕೃಷ್ಣಾ ಬೇಸಿನ್‌ನಲ್ಲಿಯೂ ಸಹ ಉಪಯೋಗ ಮಾಡಬೇಕೆಂದು ತೀರ್ಪು ಬಂದಿತ್ತು. ಅದನ್ನೂ ಸಹ ಹಿಂದಿನ ಸರ್ಕಾರದಲ್ಲಿ ನಾನು ಪ್ರಶ್ನೆ ಮಾಡಿದ್ದೆನು. ಕೃಷ್ಣಾ ಬೇಸಿನ್ ಬಗ್ಗೆ ಇಡೀ ದೇಶದಲ್ಲಿ ಜನ ಬ್ರಿಟಿಷರ ಕಾಲದಲ್ಲಿಯೂ ಸಹ ಬರೆದಿದ್ದಾರೆ. ಕೇವಲ ಪುಸ್ತಕದಲ್ಲಿ ಬರೆದಿರುವುದನ್ನು ಹೇಳಿಕೊಂಡು ಹೋಗುವುದಾಗಿದೆ. Highest drought-prone area ದಲ್ಲಿ ನಾವಿದ್ದೇವೆ. ನಮಗೆ ನೀವು ನೀರನ್ನು ಅಲಾಟ್ ಮಾಡಿ ಎಂದು ಕೇಳಿದ್ದೇವೆ. ನಾನು ಒಂದು ದಿವಸ ಹೋರಾಟ ಮಾಡಿದ್ದಕ್ಕೆ ನನಗೆ ಒಂದು ಟಿಎಂಸಿ ನೀರು ಕೊಟ್ಟರು. ಇವತ್ತಿಗೂ ಭೂದಾಳ್ ಪಿರಾಪುರಿ ಏತ ನೀರಾವರಿ ಯೋಜನೆಯನ್ನು ಅನುಷ್ಠಾನ ಮಾಡಿ ಎಂದು ಹೋರಾಟ ಮಾಡುತ್ತಿದ್ದೇವೆ. ಆದರೆ ನೀರು ಕೊಡುವುದಿಲ್ಲ.

ಅಧ್ಯಕ್ಷರು: ಹೋರಾಟ ಮಾಡಿ "ಹೋರಾಟ ಜೈಲು, ಅನ್ಯಾಯ ಬಯಲು."

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ಅಧ್ಯಕ್ಷರೆ, ಇವರು ಜಿಂದಾಲ್‌ನವರಿಗೆ ಕೊಡುತ್ತಾರೆ, ರೈತರಿಗೆ ಕೊಡುವುದಿಲ್ಲ. ಏಕೆಂದರೆ ರೈತರು ಹಣ ಕೊಡುವುದಿಲ್ಲವಲ್ಲ, ಹಾಗಾಗಿ ಜಿಂದಾಲ್‌ನವರಿಗೆ ಕೊಡುತ್ತಾರೆ, ರಾತ್ರೋರಾತ್ರಿ ಒಳಗೆ ಕುಳಿತುಕೊಂಡು ಅಗ್ರೀಮೆಂಟ್ ಮಾಡುತ್ತಾರೆ. Xindia steel factory ಗೆ ನೀರು ಕೊಡುತ್ತಾರೆ. ಆದರೆ ನಾವು ಶಾಸಕರಾಗಿ

ನಮ್ಮ ಜನರಿಗೆ ಮಾತು ಕೊಟ್ಟು ಇಲ್ಲಿ ಬಂದು ಹೋರಾಟ ಮಾಡಿ ತಮ್ಮ ಮೂಲಕ ಕಳಕಳಿಯಿಂದ ಕೇಳಿಕೊಂಡು ಆರು–ಏಳು ವರ್ಷಗಳ ಕಾಲ ಹೋರಾಟ ಮಾಡಿದರೂ ಕೂಡ 4 ಟಿಎಂಸಿ ನೀರಿಗೆ ಇವರ ಹತ್ತಿರ ನಾವು ಭಿಕ್ಷೆ ಬೇಡಬೇಕೆ? ನಮ್ಮ ಭಾಗದ ಜನರಿಗೆ ನ್ಯಾಯ ಕೊಡಲಿಕ್ಕೆ ಇವತ್ತು ವಿಧಾನಸಭೆಯಲ್ಲಿ ಸಾಧ್ಯವಿಲ್ಲವೆ? ಇದನ್ನು ಪ್ರಶ್ನೆ ಮಾಡಿದರರೆ ಅವರು ಹೇಳುತ್ತಾರೆ, ಇಲ್ಲ, ಇಲ್ಲ, ಇದನ್ನು ಕೊಡುವುದಕ್ಕೆ ಬರುವುದಿಲ್ಲ. ಇದು A-Scheme ನಲ್ಲಿ ಬರುತ್ತದೆ, ಇದು B-Scheme ನಲ್ಲಿ ಬರುತ್ತದೆ ಎಂದು ಹೇಳುತ್ತಾರೆ. ಯಾವ ಸ್ಕೀಮ್ ಬೇಡ ಸ್ವಾಮಿ. ನಮಗೆ ನ್ಯಾಯಯುತವಾಗಿ ನಮ್ಮ ಜಿಲ್ಲೆಗೆ ನೀರು ಎಷ್ಟು ಬೇಕಾಗಿದೆ, ಆ ನೀರನ್ನು ಮರು ಹಂಚಿಕೆ ಮಾಡಬೇಕು. ಇಲ್ಲದೆ ಹೋದರೆ ಮುಂದಿನ ದಿನಮಾನಗಳಲ್ಲಿ ಡ್ಯಾಮ್ ಅನ್ನು ಎತ್ತರ ಮಾಡಲಿಕ್ಕೆ ಹೋಗುತ್ತಿದ್ದೀರಿ, ಮತ್ತೆ ನಮ್ಮ ಜನರ ಹತ್ತಿರ ಹೋಗಿ ಭೂಮಿಯನ್ನು ಕೇಳುವುದಕ್ಕೆ ಹೋಗುತ್ತಿದ್ದೀರಿ, ಆಗ ನಮ್ಮ ಜನರಿಗೆ ನೀವು ಏನು ಉತ್ತರವನ್ನು ಕೊಡುತ್ತೀರಿ? ಏನು ಉತ್ತರ ಕೊಟ್ಟು ಅವರ ಹತ್ತಿರ ಭೂಮಿಯನ್ನು ಅವರ ಹತ್ತಿರ ಕೇಳುವುದಕ್ಕೆ ಹೋಗುವಿರಿ? ಮತ್ತೆ 22 ಹಳ್ಳಿಗಳನ್ನು ಗುಳೆ ಎಬ್ಬಿಸಲಿಕ್ಕೆ ಹೋಗುತ್ತಿದ್ದೀರಿ? ಅವರಿಗೆ ಏನು ಸಹಾಯ ಮಾಡುತ್ತೇವೆಂದು ನೀವು ಹೇಳುವಿರಿ? ಇವೆಲ್ಲವನ್ನೂ ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಅದಕ್ಕೆ ಎ–ಸ್ಕೀಮ್, ಬಿ–ಸ್ಕೀಮ್ ಎಂದು ಹೇಳಿ ಇವತ್ತೇನು ನಮ್ಮ ಭಾಗದಲ್ಲಿ ಅನ್ಯಾಯವಾಗಿದೆ, ಅದನ್ನು ಸರಿಪಡಿಸಬೇಕು. ಬಚಾವತ್ ತೀರ್ಪಿನಲ್ಲಿ ಹಂಚಿಕೆಯಾಗಿರುವ 173 ಟಿಎಂಸಿ ನೀರಿನಲ್ಲಿ ಕನಿಷ್ಠ ನಮ್ಮ ಅವಳಿ ಜಿಲ್ಲೆಗಳಿಗೆ ಬೇಕಾಗಿರುವಂಥ ಪ್ರಮುಖವಾಗಿರುವ ನೀರಾವರಿ ಯೋಜನೆಗಳಿಗೆ ಹೆಚ್ಚುವರಿಯಾಗಿ ನೀರನ್ನು ಮರುಹಂಚಿಕೆ ಮಾಡಬೇಕು ಮತ್ತು ಮುಂಗಾರು ಮತ್ತು ಹಿಂಗಾರು ಬೆಳೆಗೆ ಶಾಶ್ವತವಾದಂಥ ನೀರಾವರಿಯನ್ನು ಮಾಡಲಿಕ್ಕೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ತಮ್ಮ ಮೂಲಕ ವಿನಂತಿಸುತ್ತೇನೆ.

ಅಧ್ಯಕ್ಷರು: ಗೋವಿಂದ ಎಂ.ಕಾರಜೋಳ ಮಾತನಾಡಲಿ ಆಮೇಲೆ ನೀವು ಮಾತನಾಡಿ.

ಶ್ರೀ ಗೋವಿಂದ .ಎಂ. ಕಾರಜೋಳ (ಮುಧೋಳ): ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಮಾತನಾಡಿರತಕ್ಕಂಥ ಸನ್ಮಾನ್ಯ ಶಾಸಕರಾದ ಶ್ರೀ ಎ.ಎಸ್.ಪಾಟೀಲ್‌ರವರು ಸಾಕಷ್ಟು ಅಂಕಿ ಅಂಶಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ. ನಾನು ಈಗ ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು: 173 ಟಿಎಂಸಿ ನೀರನ್ನು ಯಾವ ಪ್ರಾಜೆಕ್ಟ್ ಮೂಲಕ ಹಂಚಬೇಕು ಎನ್ನುವುದನ್ನು ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಗೋವಿಂದ .ಎಂ. ಕಾರಜೋಳ: ಕೃಷ್ಣಾ ಮೇಲ್ದಂಡೆ ಯೋಜನೆ ನಮಗಾಗಿಯೇ ಇರುವಂಥ ಯೋಜನೆ. ಬಿಜಾಪುರ, ಬಾಗಲಕೋಟೆ, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಿಗೆ ಇರುವುದು. ಮನೆ ಮಠ, ಆಸ್ತಿಪಾಸ್ತಿ ಕಳೆದುಕೊಂಡಿರುವವರು ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯವರು. ಈಗಾಗಲೇ 196 ಹಳ್ಳಿಗಳನ್ನು ಕಳೆದುಕೊಂಡಿದ್ದೇವೆ.

ಅಧ್ಯಕ್ಷರು: ನಾವೆಷ್ಟು ಹಳ್ಳಿಗಳನ್ನು ಕಳೆದುಕೊಂಡಿದ್ದೇವೆ ಗೊತ್ತೇ?

ಶ್ರೀ ಗೋವಿಂದ .ಎಂ. ಕಾರಜೋಳ: ತಾವು ಕಳೆದುಕೊಂಡಿದ್ದರೂ ತಾವು ಮಲೆನಾಡಿನಲ್ಲಿದ್ದೀರಿ. ನಮ್ಮ ದುರ್ದೈವದ ಸಂಗತಿ ಏನೆಂದರೆ, ದೇಶದ ಎರಡನೆ ಬರಗಾಲದ ಜಿಲ್ಲೆಯೆಂದರೆ ಬಿಜಾಪುರ. ಮೊದಲನೆಯದು ರಾಜಸ್ತಾನ, ಎರಡನೆಯದು ಬಿಜಾಪುರ. ನಾವು 196 ಹಳ್ಳಿಗಳನ್ನು ಕಳೆದುಕೊಂಡಿದ್ದೇವೆ. ಹುಟ್ಟಿ ಬೆಳೆದಂಥ ಮನೆ ಮಠಗಳನ್ನು ಕಳೆದುಕೊಂಡಿದ್ದೇವೆ. ನಮ್ಮ ಜನರ ಜೊತೆ ಇರತಕ್ಕಂಥ ಭಾವನಾತ್ಮಕವಾದ ಸಂಬಂಧಗಳನ್ನು ಕಳೆದುಕೊಂಡಿದ್ದೇನೆ. ನಮ್ಮ ಆಸ್ತಿಪಾಸ್ತಿ ಅಷ್ಟೇ ಹೋಗಿಲ್ಲ. ನಮ್ಮ ಬದುಕು ಹಿನ್ನೀರಿನಲ್ಲಿ ಮುಳುಗಿದೆ. ಸರ್ಕಾರದ ಜವಾಬ್ದಾರಿ, ಕರ್ತವ್ಯ ಏನು? ಮುಳುಗಿ ಹೋದಂಥ ಜಿಲ್ಲೆಗಳಿಗೆ ಕಳೆದುಕೊಂಡಂಥ ಹಳ್ಳಿಗಳಿಗೆ ಪ್ರಪ್ರಥಮ ಪ್ರಾಶಸ್ತ್ಯದೊಳಗೆ ನೀರಾವರಿ ಯೋಜನೆಗಳನ್ನು ಮಾಡಿಕೊಡಬೇಕು. 173 ಟಿಎಂಸಿ ನೀರು ಮರುಹಂಚಿಕೆ ಆಗಬೇಕೆನ್ನುವ demand ಏನಿದೆ, ಅದು ಯೋಗ್ಯವಾದಂಥ demand ಆಗಿದೆ. ನಾವು ಕೇವಲ ಬದುಕನ್ನು ಕಳೆದುಕೊಂಡಿಲ್ಲ. ಹಳ್ಳಿಗಳನ್ನು ಕಳೆದುಕೊಂಡಿಲ್ಲ. ಹುಟ್ಟಿಬೆಳೆದಂಥ ಮನೆ

ಮತಗಳನ್ನು ಕಳೆದುಕೊಂಡಿದ್ದೇವೆ ಅಷ್ಟೇ ಅಲ್ಲ, ನಮ್ಮ ಮೈಮೇಲೆ ಇರತಕ್ಕಂಥ, ನಮ್ಮ ತಾಯಂದಿರ ಮೈಮೇಲೆ ಇರತಕ್ಕಂಥ ಬಂಗಾರದ ಒಡವೆಗಳನ್ನು ಕೂಡ ಶ್ರೀಮತಿ ಇಂದಿರಾ ಗಾಂಧಿಯವರನ್ನು, ನಿಜಲಿಂಗಪ್ಪನವರನ್ನು, ತೂಕ ಮಾಡಲಿಕ್ಕೆ ಕಳೆದುಕೊಂಡಿದ್ದೇವೆ.

ಅಧ್ಯಕ್ಷರು: ವಿಷಯಕ್ಕೆ ಬನ್ನಿ.

ಶ್ರೀ ಗೋವಿಂದ ಎಂ. ಕಾರಜೋಳ: ಅಧ್ಯಕ್ಷರೆ, ನೇರ ವಿಷಯಕ್ಕೆ ಬರುತ್ತೇನೆ, ದೇಶದ ಇತಿಹಾಸದಲ್ಲಿ ಯಾರೂ ಕೂಡ ನೀರಾವರಿ ಯೋಜನೆಗಳಿಗಾಗಿ ಈ ದೇಶದ ಪ್ರಧಾನ ಮಂತ್ರಿಗಳನ್ನು ತೂಗಿದಂತ ಇತಿಹಾಸವಿಲ್ಲ. ಮುಖ್ಯಮಂತ್ರಿಗಳನ್ನು ತೂಗಿದಂಥ ಇತಿಹಾಸವಿಲ್ಲ. ಆ ರೀತಿ ಆಗಬಾರದೆಂದು ಹೋರಾಟ ಮಾಡಿದಂಥ ಇತಿಹಾಸಗಳಿವೆ. ನಾನು ಸರ್ಕಾರಕ್ಕೆ ಇಷ್ಟೇ ವಿನಂತಿ ಮಾಡುತ್ತೇನೆ. 1994 ರಲ್ಲಿ ನಿರಿನ ಹಂಚಿಕೆ ಸ್ಕೀಮ್-ಎ, ಸ್ಕೀಮ್-ಬಿ ನಲ್ಲಿ ಆಗಿದೆ ಎನ್ನುವುದು ನಮ್ಮ ತೀರ್ಪಿನಲ್ಲಿ ಎಲ್ಲಿಯೂ ಇಲ್ಲ. ನಾವು ಸ್ಕೀಮ್-ಎ, ಸ್ಕೀಮ್-ಬಿ ಎಂದು ಮಾಡಿಕೊಂಡಿರುವುದು. ಬಚಾವತ್ ತೀರ್ಪಿನಲ್ಲಿ ನಮಗೆ allocation ಆದಂಥ 734 ರಲ್ಲಿ 5 ಟಿಎಂಸಿ ನೀರನ್ನು ಕುಡಿಯುವ ನೀರಿಗಾಗಿ ಮದ್ರಾಸ್‌ಗೆ ಬಿಟ್ಟುಕೊಟ್ಟ ಮೇಲೆ 729 ಟಿಎಂಸಿ ಇತ್ತು. ಅದರಲ್ಲಿಯೂ ನಮಗೆ ನ್ಯಾಯ ಸಿಗಲಿಲ್ಲ, ಏಕೆಂದರೆ ನಮಗೆ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯವರಿಗೆ flow irrigation ಇಲ್ಲ. Lift Irrigation ಆಗಬೇಕು. 9 ಪ್ರಮುಖ Lift Irrigation ಆಗಬೇಕಾಗಿದೆ. ಇವತ್ತಿಗೂ ಅವು complete ಆಗಲಿಲ್ಲ.

ಅಧ್ಯಕ್ಷರು: ನೀವು ಇದ್ದರಲ್ಲಾ? ನೀವು ಸರ್ಕಾರವನ್ನು ಅಷ್ಟು ವರ್ಷಗಳ ಕಾಲ ನಡೆಸಿದ್ದಿರಿ.

ಶ್ರೀ ಗೋವಿಂದ .ಎಂ. ಕಾರಜೋಳ: ಸರ್ಕಾರವನ್ನು ನಡೆಸಿದ್ದೇವೆ. ಸರ್ಕಾರ ನಡೆಸಿದರೂ ಇದೇ ಹಣೆಬರಹ ಇದೆ, ನಡೆಸದಿದ್ದಾಗಲೂ ಇದೇ ಹಣೆಬರಹ ಇದೆ. ನೀವು ಅಲ್ಲಿಗೆ ಹೋದರೆ ನಾನು ಬಹಳ ಕೆಟ್ಟದಾಗಿ ಹೇಳಬೇಕಾಗುತ್ತದೆ. ನಾವು ಯಾರನ್ನು blame ಮಾಡುವಂಥ

ಪರಿಸ್ಥಿತಿಯಲ್ಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ State Re-Organization ಆದಮೇಲೆ ಹೆಚ್ಚು ನಮ್ಮವರೇ ಮುಖ್ಯಮಂತ್ರಿಗಳಾಗಿದ್ದರೆ. ಶ್ರೀಯುತರುಗಳಾದ ಜತ್ತಿ, ನಿಜಲಿಂಗಪ್ಪನವರು, ಕಂಠಿ, ವೀರೇಂದ್ರ ಪಾಟೀಲರು, ಧರಂಸಿಂಗ್‌ರವರು, ಬೊಮ್ಮಾಯಿರವರು, ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾರೆ. ಯಾರನ್ನು ನಾವು blame ಮಾಡೋಣ.

ಅಧ್ಯಕ್ಷರು: ಯಾರೂ ಇಲ್ಲ. ಆಯಿತು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಗಳಲ್ಲಿರುವ ಯೋಜನೆಗಳಿಗೆ ಮೊದಲು ನೀರಿನ allocation ಆಗಬೇಕು. ಉಳಿದದ್ದನ್ನು ಬೇರೆ ಕಡೆಗೆ ಹಂಚಿಕೆ ಮಾಡಬೇಕು.

ಅಧ್ಯಕ್ಷರು: ಅದಕ್ಕೇನು ಪ್ರಾಜೆಕ್ಟ್ ಆಗಬೇಕೆ? ಅಥವಾ ಇರುವ ಪ್ರಾಜೆಕ್ಟ್‌ನಲ್ಲಿ ಮಾಡಬೇಕೆ?

ಶ್ರೀ ಗೋವಿಂದ ಎಂ. ಕಾರಜೋಳ: ಇಲ್ಲ ಸರ್, ಇರುವ ಪ್ರಾಜೆಕ್ಟ್‌ನಲ್ಲೇ ಅವೆಲ್ಲಾ sub-basin project ನಲ್ಲಿ ಬರುವಂಥದ್ದು.

ಅಧ್ಯಕ್ಷರು: ಅವನ್ನೆಲ್ಲಾ ಸರಿಯಾಗಿ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ: Lift irrigation, ಮುಳವಾಡ ಲಿಫ್ಟ್ ಇರಿಗೇಷನ್ ಆಗಬೇಕು. ಚಿಮ್ಮಲಗಿ ಲಿಫ್ಟ್ ಇರಿಗೇಷನ್ ಆಗಬೇಕು, ರಾಮತಾಳ ಲಿಫ್ಟ್ ಇರಿಗೇಷನ್ ಆಗಬೇಕು, ಗುತ್ತಿ ಬಸವಣ್ಣ ಆಗಬೇಕು, ಆಲಮಟ್ಟಿ Left bank canal and right bank canal ಆಗಬೇಕು, ಹೆರಕಲ್ ಆಗಬೇಕು, ಇಂಡಿ ಆಗಬೇಕು, ಇವೆಲ್ಲಾ Lift irrigation ಆಗಬೇಕಾಗಿದೆ. ಈ Lift irrigation ಗೆ ಬೇಕಾಗಿರುವಂತ ನೀರನ್ನು ಹಂಚಿಕೆ ಮಾಡಬೇಕು.

ಅಧ್ಯಕ್ಷರು: ಅದಕ್ಕೆಲ್ಲಾ ಪ್ರಾಜೆಕ್ಟ್ sanction ಆಗಿವೆಯೇ? ಅದರ ಬಗ್ಗೆ ಹೇಳಿ.

ಶ್ರೀ ಗೋವಿಂದ ಎಂ.ಕಾರಜೋಳ: ಕೆಲವು sanction ಆಗಿವೆ, ಕೆಲವು ಆಗಿಲ್ಲ. ನಾವು ಹಿಂದಿನ ಸರ್ಕಾರದಲ್ಲಿ ಈಗಾಗಲೇ ಏಳು ಪ್ರಾಜೆಕ್ಟ್‌ಗಳಿಗೆ sanction ಕೊಟ್ಟಿದ್ದೇವೆ.

ಅಧ್ಯಕ್ಷರು: ಉಳಿದ ಪ್ರಾಜೆಕ್ಟ್‌ಗಳಿಗೆ ಕೊಡಿ ಎಂದು ಕೇಳಿ.

ಶ್ರೀ ಗೋವಿಂದ ಎಂ. ಕಾರಜೋಳ: ಅದಕ್ಕೆ ನೀರಿನ ಹಂಚಿಕೆ ಆಗಬೇಕು. ಆ ನೀರಿನ re-allocation ಆಗಬೇಕು. 1994-95 ರಲ್ಲಿ ಹಂಚಿಕೆ ಆಗಿರುವ ನೀರನ್ನು ಮತ್ತೆ 2002 ರಲ್ಲಿ ಮತ್ತೆ ಮರು ಹಂಚಿಕೆ ಮಾಡಿದ್ದಾರೆ. ಆಗ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗೆ ಅನ್ಯಾಯವಾಗಿದೆ.

ಅಧ್ಯಕ್ಷರು: ಯಾವ ಇಸವಿಯಲ್ಲಿ ಆಗಿದೆ?

ಶ್ರೀ ಗೋವಿಂದ ಎಂ. ಕಾರಜೋಳ: 2002 ರಲ್ಲಿ ಶ್ರೀ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದಂಥ ಸಂದರ್ಭದಲ್ಲಿ ಆಗಿದೆ. ಈಗೇನು ಹೇಳಿದವರಲ್ಲಾ Steel Industryಗೆ ಹಣವನ್ನು ಕೊಟ್ಟವರಿಗೆ ಕೊಟ್ಟಿದ್ದಾನೆಂದು, ಅವೆಲ್ಲಾ ಧರಂಸಿಂಗ್‌ರವರ ಕಾಲದಲ್ಲಿ ಸಹಿ ಆಗಿರುವುದು.

ಅಧ್ಯಕ್ಷರು: ಹೌದಾ?

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಯಾರ್‍ಯಾರು ಸಹಿ ಮಾಡಿದ್ದಾರೆ ಎಂಬ ಬಗ್ಗೆ ಈಗ ನನ್ನ ಹತ್ತಿರ ದಾಖಲಾತಿಗಳಿವೆ. ನೀವು ಸಹಿ ಮಾಡಿರುವಂಥವು ನನ್ನ ಹತ್ತಿರ ದಾಖಲಾತಿಗಳಿವೆ, ಬೇಡ, ರಾಜಕಾರಣಕ್ಕೆ ಹೋಗುವುದು ಬೇಡ.

(ಗೊಂದಲ)

ಅಧ್ಯಕ್ಷರು: ಅವರು ಹೇಳುವುದನ್ನು ಹೇಳಲಿಬಿಡಿ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ನಾನು ಮಾತನಾಡಬೇಕಾದರೆ ನೀವೇನು ಮಾಡಿದ್ದೀರಿ ಎಂಬ ಬಗ್ಗೆ ನಾನು ರಾಜಕೀಯ ವಿಷಯವನ್ನೇ

ತೆಗೆದುಕೊಳ್ಳಲೇ ಇಲ್ಲ. ಒಟ್ಟಾರೆ general ಆಗಿ ಮಾತನಾಡಿದ್ದೇನೆ. ನೀವು ಸಹಿ ಮಾಡಿರುವ ದಾಖಲಾತಿಗಳನ್ನು ನನ್ನ ಹತ್ತಿರ ಇದೆ. ರಾಜಕಾರಣ ಇಲ್ಲಿ ಬೇಡ.

ಶ್ರೀ ಗೋವಿಂದ .ಎಂ. ಕಾರಜೋಳ: ನಾನು ರಾಜಕೀಯದ ಬಗ್ಗೆ ಹೇಳಿಲ್ಲ. ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಅಷ್ಟೇ ಸೀಮಿತವಾಗಿ ಮಾತನಾಡುತ್ತಿದ್ದೇನೆ. ರಾಜಕೀಯದ ಬಗ್ಗೆ ಮಾತನಾಡಬೇಕಾದರೆ ಅಷ್ಟು ಜನರ ಮುಖ್ಯಮಂತ್ರಿಗಳ ಹೆಸರುಗಳನ್ನು ಈಗ ಹೇಳುತ್ತಿರಲಿಲ್ಲ. ರಾಮಕೃಷ್ಣ ಹೆಗಡೆಯವರ ಹೆಸರು ಹೇಳಿದ್ದೇನೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ನೀವು ರಾತ್ರಿ agreementಗೆ ಸಹಿ ಹಾಕಿರುವುದೆಂದು ಹೇಳಿದ್ದಕ್ಕೆ ನಾನು ಹೇಳಿದ್ದು, ಬೇರೆ ಏನಿಲ್ಲ. ನೀರಿನ ಹಂಚಿಕೆ ಮತ್ತೆ ಆಗುವುದಕ್ಕೆ ಯಾವುದೇ ತಾಂತ್ರಿಕ ಅಥವಾ ಕಾನೂನಿನ ತೊಂದರೆಗಳಿಲ್ಲ. ಸರ್ಕಾರ ಮನಸ್ಸು ಮಾಡಿ ನಮಗೇನು ಸಿಗಬೇಕು ಆ ನೀರಿನ ಮರು ಹಂಚಿಕೆ ಆಗಬೇಕು. ಅದು ಸರ್ಕಾರದ ಕೈಯಲ್ಲಿದೆ. ಬೇರೆ ಯಾರೂ ಬೇಕಾಗಿಲ್ಲ.

ಅಧ್ಯಕ್ಷರು: ಸರ್ಕಾರ ಯಾವ ರೀತಿ ಮಾಡಬೇಕು?

ಶ್ರೀ ಗೋವಿಂದ ಎಂ. ಕಾರಜೋಳ: ಮೊದಲು ಅಂದರೆ 1996–97ರಲ್ಲಿ ನಾವು ಯಾವ್ಯಾವ ಸ್ಕೀಮ್‌ಗಳಿಗೆ ಏನೇನು allocation ಮಾಡಿದ್ದೇವೋ ಅದನ್ನು confirm ಮಾಡಲಿ, ಅದಕ್ಕಿಂತ ಹೆಚ್ಚಿನದೇನೂ ಮಾಡಬೇಕಾಗಿಲ್ಲ. ಅದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಸುದೈವಕ್ಕೆ ನಮ್ಮ ಜಿಲ್ಲೆಯವರೇ ನೀರಾವರಿ ಸಚಿವರಾಗಿದ್ದಾರೆ. ಇದು ಖಂಡಿತ ಆಗುತ್ತದೆಂಬ ಭರವಸೆ ಕೂಡ ನನಗಿದೆ. ಕೂಡಲೇ ಇದನ್ನು ಮರು ಹಂಚಿಕೆ ಮಾಡುವ ಕೆಲಸವಾಗಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರೆ: ಸಂಕ್ಷಿಪ್ತವಾಗಿ ಹೇಳಿ ಸಮಯ ಆರು ಗಂಟೆ ಆಯಿತು.

ಶ್ರೀ ಕಾಶಪ್ಪನವರ್ ವಿಜಯಾನಂದ್ ಶಿವಶಂಕರಪ್ಪ (ಹುನಗುಂದ): ಮಾನ್ಯ ಅಧ್ಯಕ್ಷರೆ, ನಿಯಮ 69ರಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ

ಕೊಟ್ಟಿರುವುದಕ್ಕೆ ಮೊದಲಿಗೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ನಮ್ಮ ಹಿರಿಯ ಸದಸ್ಯರಾದ ಎ.ಎಸ್.ಪಾಟೀಲ್ ಮತ್ತು ಗೋವಿಂದ ಎಂ.ಕಾರಜೋಳರವರು ಕೃಷ್ಣಾ ಮೇಲ್ದಂಡೆ ಬಗ್ಗೆ ಸಾಕಷ್ಟು ವಿವರಗಳನ್ನು ಕೊಟ್ಟಿದ್ದಾರೆ. ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೆ ಯಾವುದೇ ಸರ್ಕಾರ ಕೂಡ ನಮಗೆ ನ್ಯಾಯವನ್ನು ಕೊಟ್ಟಿಲ್ಲ. ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ ಮೂಲತಃ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯವರು ನಾವು ಮನೆಗಳನ್ನು ಜಮೀನುಗಳನ್ನು ಕಳೆದುಕೊಂಡಿದ್ದರೂ ಕೂಡ ಇವತ್ತಿಗೂ ಕುಡಿಯುವ ನೀರಿನಿಂದ ಹಿಡಿದು ರೈತರಿಗೆ ನೀರಾವರಿಗೆ ನೀರನ್ನು ಒದಗಿಸುವಲ್ಲಿ ಬಹಳಷ್ಟು ಅನ್ಯಾಯವಾಗಿದೆ. ಆದಕಾರಣ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಬಚಾವತ್ ಆಯೋಗದ ತೀರ್ಪಿನ ಹಿನ್ನೆಲೆಯಲ್ಲಿ ಮತ್ತೊಮ್ಮೆ ಇದು ಮರು ಹಂಚಿಕೆ ಆಗಬೇಕೆಂಬ ಉದ್ದೇಶದಿಂದ ನಾನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಜಲಸಂಪನ್ಮೂಲ ಸಚಿವರಿಗೆ ಹೇಳುತ್ತಿದ್ದೇನೆ. ಏಕೆಂದರೆ ನಾರಾಯಣಪುರ ಮತ್ತು ಆಲಮಟ್ಟಿ ಅಣೆಕಟ್ಟಿನ ಹಿನ್ನೀರಿನಲ್ಲಿ ಬಳಲುತ್ತಿರುವ ನಮಗೆ ನಮ್ಮ ಮನೆ ಮುಂದೆ ನೀರು ಹರಿಯುತ್ತಿದೆ, ಆದರೆ ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗುವುದಿಲ್ಲವೆಂದು ವಿಷಾದದ ಸಂಗತಿಯಾಗಿದೆ. ಕೊಪ್ಪಳ ಏತ ನೀರಾವರಿ, ನಂದವಾಡಗಿ ಏತ ನೀರಾವರಿ ಈ ರೀತಿ ಅನೇಕ ಯೋಜನೆಗಳು ಹೋಗುತ್ತಿವೆ. ಕೇವಲ ರಾಮತಾಳ ಏತ ನೀರಾವರಿ ಯೋಜನೆಯೊಂದನ್ನು ಬಿಟ್ಟರೆ ಎಲ್ಲ ನೀರಾವರಿ ಯೋಜನೆಗಳನ್ನು ಕೂಡ ನಮ್ಮ ಮುಂದೆ ಹೋದರೂ ಕೂಡ ನಮಗೆ ನೀರನ್ನು ಕೊಡುತ್ತಿಲ್ಲ. ಆದಕಾರಣ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಜಲಸಂಪನ್ಮೂಲ ಸಚಿವರಲ್ಲಿ ಬಚಾವತ್ ಆಯೋಗದ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರದಿಂದ ಪ್ರಸ್ತಾವನೆಯನ್ನು ಸಲ್ಲಿಸುತ್ತಿದ್ದೀರಿ. ಇದು ಮರುಹಂಚಿಕೆಯಾಗಬೇಕು ಮತ್ತು ನಮಗೆ ಸಂಪೂರ್ಣ ನ್ಯಾಯವನ್ನು ಒದಗಿಸಬೇಕೆಂಬ ವಿನಂತಿಯನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ: ಮಾನ್ಯ ಅಧ್ಯಕ್ಷರೆ, ಕೃಷ್ಣಾ ಬಚಾವತ್ ಅವಾರ್ಡ್ ಪ್ರಕಾರ ಮರು ಹಂಚಿಕೆ ನೀರನ್ನು ಮಾಡಬೇಕೆಂಬ ವಿಷಯವನ್ನು ನಿಯಮ 69ರಡಿಯಲ್ಲಿ ಎ.ಎಸ್.ಪಾಟೀಲ್ ರವರು ಮತ್ತು ಇತರರು ಏನು ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದರು, ಅದರಲ್ಲಿ ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ಮೊದಲಿಗೆ ಧನ್ಯವಾದಗಳನ್ನು ಸಲ್ಲಿಸುವುದಕ್ಕೆ ಇಚ್ಛೆಪಡುತ್ತೇನೆ. ಬಿಜಾಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಯವರು ಸಾಕಷ್ಟು ತೊಂದರೆಗೀಡಾಗಿದ್ದೇವೆ ಎಂಬ ಮಾತನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ನಾನು ಸ್ವತಃ ಆಸ್ತಿ ಕಳೆದುಕೊಂಡಿದ್ದೇನೆ. ಸುಮಾರು 18 ಊರುಗಳಲ್ಲಿ ಜಮೀನನ್ನು ಕಳೆದುಕೊಂಡಿದ್ದೇನೆ. ಸ್ವಂತ ವಾಸಿಸುವ ಮನೆಯನ್ನೂ ಕೂಡ ಕಳೆದುಕೊಂಡಿದ್ದೇನೆ. ಇವತ್ತಿಗೂ ಕೂಡ ರಸ್ತೆಯಿಲ್ಲದೆ ಪರದಾಡತಕ್ಕಂಥ ಪರಿಸ್ಥಿತಿಯಿದೆ. ದಾರಿದೀಪವಿಲ್ಲದ ವ್ಯವಸ್ಥೆಯಿದೆ. ಕುಡಿಯುವುದಕ್ಕೆ ನೀರಿಲ್ಲದ ವ್ಯವಸ್ಥೆಯಲ್ಲಿ ಇವತ್ತಿಗೂ ಕೂಡ ಸಂಕಷ್ಟದಲ್ಲಿದ್ದೇವೆ.

ಅಧ್ಯಕ್ಷರು: ಈಗಲೂ ಕೂಡ?

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) (ಮುದ್ದೇಬಿಹಾಳ): ಈಗಲೂ ಕೂಡ ಹೀಗೇ ಇದೆ. ಬಾಗಲಕೋಟೆಗೇನು ಮೂಲಭೂತ ಸೌಕರ್ಯಗಳನ್ನು ಕೊಟ್ಟಿದ್ದಾರೋ ಅದಕ್ಕಿಂತ ವಂಚಿತರಾದವರು ನಾವಾಗಿದ್ದೇವೆ. ನನಗೆ ಎಷ್ಟು ಸಿಕ್ಕಿದೆಯೆಂದು ಕೇಳಿದರೆ ನೀವು ಗಾಬರಿಯಾಗಬಹುದು. ನಾನೇನೋ ದೇವರ ದಯೆಯಿಂದ ಬದುಕಿದ್ದೇನೆ. ಆ ಮಾತು ಬೇರೆ. ಆದರೆ ಬಡವರು, ಎಕರೆ 800 ರೂಪಾಯಿಗಳು ರೈತರು ಜಮೀನು acquire ಆಗಿದ್ದು, enhancement courtನಲ್ಲಿ ಆಗಿದ್ದಕ್ಕೆ ಸಿಕ್ಕಿದ್ದು, ಕೇವಲ 2000 + solatium and interest ಕೂಡಿ 10,000 ರಿಂದ 15,000 ರೂಪಾಯಿಗಳು ಸಿಕ್ಕಿದೆ. ಅದು ಸಿಕ್ಕಿರುವುದು 1996–98ರಲ್ಲಿ ಸಿಕ್ಕಿದ ಹಣ ಎಷ್ಟೆಂದರೆ 2,000, 3,000 ರೂಪಾಯಿಗಳು. ಇಂತಹ ಪರಿಸ್ಥಿತಿಯಿರುವಾಗ ನಮಗೆ ನೀರು ಕೂಡ ಸರಿಯಾಗಿ ಸಿಗುತ್ತಿಲ್ಲ. ಕಾರಣವೇನೆಂದರೆ irrigation projects ಮಾಡುವಂತಹ ಸಂದರ್ಭದಲ್ಲಿ ನಾನು allocation ಒಂದನ್ನೇ touch ಮಾಡುತ್ತಿಲ್ಲ. ಮಾಡುವಂತಹ ಸಂದರ್ಭದಲ್ಲಿ ಏನು earmark ಮಾಡಿ allocation

ಮಾಡಿದ್ದಾರೆ, basic ಆಗಿ ಅಲ್ಲೇ ತಪ್ಪಾಗಿದೆ. ನಮ್ಮದು topographical area ತಾವು ಬಂದು ನೋಡಿದರೆ ನಮ್ಮ ಜಮೀನುಗಳು ಬಹಳಷ್ಟು ಏರುಪೇರಿದೆ. Undulation ಸಿಕ್ಕಾಪಟ್ಟೆ ಇದೆ. ಎತ್ತರ ಪ್ರದೇಶಗಳಿವೆ. ನನ್ನ ಜಮೀನು ಹೊಳೆ ಪಕ್ಕಕ್ಕೆ ಮುಳುಗಡೆಯಾಗಿದೆ. ಪಾಟೀಲ್ ಮತ್ತು ಕಾಶಪ್ಪನವರು ಹೇಳಿದ ಹಾಗೆ ಕಾಶಪ್ಪನವರೂ ಕೂಡ ಸ್ವತಃ ಜಮೀನು ಮತ್ತು ಮನೆಯನ್ನು ಕಳೆದುಕೊಂಡಿದ್ದಾರೆ. ಅವರ ಮತ್ತು ನನ್ನ ಮನೆಯ ಮುಂದೆ ನೀರಿದೆ. ಆದರೆ ನನ್ನ ಜಮೀನಿಗೆ ನೀರಿಲ್ಲ. ALBC ಯಿಂದ ಮತ್ತು ಚಿಮ್ಮಲಗಿಯಿಂದ ನೀರು ಬರುವುದಿಲ್ಲ ಏಕೆಂದರೆ ಎತ್ತರ ಪ್ರದೇಶದಲ್ಲಿದ್ದೇವೆ. ಆ ಪ್ರದೇಶಗಳಿಗೆ ಯಾವ ರೀತಿ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸಬಹುದೆಂದು ಬೆಳಗಾವಿ ಅಧಿವೇಶನದಲ್ಲಿ ಸಾಕಷ್ಟು ಮಾತನಾಡಿ ಹಂಚಿಕೆಯನ್ನು ಯಾವ ರೀತಿ ಮಾಡಬಹುದೆಂದು ಹೇಳಿದ್ದೇವೆ. ಆದರೆ ಇವತ್ತಿಗೂ ಅನುಷ್ಠಾನಕ್ಕೆ ಬಂದಿಲ್ಲ. Industriesಗೆ ಹೆಚ್ಚು ನೀರನ್ನು ಬಳಕೆ ಮಾಡಿಕೊಳ್ಳುವುದೂ ಕೂಡ ಒಂದು ಕಡೆ ನೋವಿದೆ. ಈ ವ್ಯಾಪ್ತಿಗೆ ಇರುವುದನ್ನು ಮರು ಹಂಚಿಕೆ ಮಾಡುವಲ್ಲಿ ಬೇರೆ ಕಡೆಗೆ basin to basin ಆಗಿಲ್ಲ. ಆದರೆ ಬೇಸಿನ್‌ನಲ್ಲಿ ಯಾವ ಸ್ಕೀಮ್ ಇರಲಿಲ್ಲ. ಆ ಸ್ಕೀಮ್ ಕೂಡ ಹೊಸದಾಗಿ ಸೇರಿಕೊಂಡಿದೆ. ಆ ಸ್ಕೀಮ್ ಸೇರಿಕೊಂಡು ಕುಡಿಯುವ ನೀರಿಗೆ ಕೂಡ ಸೇರಿಕೊಂಡು ನಮಗೆ ಇವತ್ತು ನೀರಿನ ಕೊರತೆ ಬಂತು. Free board ಅನ್ನು ಎತ್ತರ ಮಾಡಿಕೊಂಡು, ಇರುವಂತಹ ALBC ಯನ್ನು Free board ಅನ್ನು ಜಾಸ್ತಿ ಮಾಡಿಕೊಳ್ಳಿಯೆಂದು ಹೇಳಿದೆ. Sunctions, water carrying capacity ಯನ್ನು ಜಾಸ್ತಿ ಮಾಡಿಕೊಳ್ಳಿ, ಹೆಚ್ಚು ಪ್ರದೇಶಕ್ಕೆ ನೀರನ್ನು ಬಳಕೆ ಮಾಡಿಕೊಳ್ಳಲಿ ಚಿಮ್ಮಲಗಿ ಲಿಫ್ಟ್ ಅನ್ನು ಮಾಡುತ್ತಿದ್ದು, ಇದನ್ನು ಸುಮಾರು 10 ಮೀಟರ್ ಎತ್ತರಕ್ಕೆ ತೆಗೆದುಕೊಂಡು ಹೋಗಿದ್ದರೆ ಇನ್ನೂ ಹೆಚ್ಚಿನ ಪ್ರದೇಶವನ್ನು command ಮಾಡಬಹುದಿತ್ತು. Tail off ಅನ್ನು ಮುಳುವಾಡ ದಿಂದ ಕಡಿಮೆ ಮಾಡಬಹುದಿತ್ತೆಂದು ಸಲಹೆಗಳನ್ನು ಕೊಟ್ಟಿದ್ದೇವು. ಇದನ್ನು ಯಾರೂ ಗಣನೆಗೆ ತೆಗೆದುಕೊಳ್ಳುವುದಿಲ್ಲ. We are not technical people. Technicians. ಏನು ಹೇಳಿರುತ್ತಾರೋ ಅದನ್ನು ಸ್ವಲ್ಪ ಮಟ್ಟಿಗೆ with common-sense ಯೋಚನೆ

ಮಾಡಿ ಸಲಹೆಯನ್ನು ಕೊಟ್ಟಿರುತ್ತೇವೆ. ಇವತ್ತಿಗೂ ಕೂಡ ಕಾರ್ಯಗತವಾಗಿಲ್ಲ. ಮರು ಹಂಚಿಕೆ ಮಾಡುವುದಕ್ಕೆ ಸಾಧ್ಯವೇ ಎಂದು ನನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತಿದ್ದೇನೆ. ಇದು ಮೂಲಭೂತವಾದ ಪ್ರಶ್ನೆಗೆ ಬರುತ್ತೇನೆ. ಮರುಹಂಚಿಕೆ ಮಾಡುವುದಕ್ಕೆ ಬರುತ್ತದೆಂದರೆ ಯಾವ ರೀತಿ ಯೋಜನೆಗಳನ್ನು ತೆಗೆದುಕೊಳ್ಳಬಹುದಾಗಿದೆಂಬುದನ್ನು ದಯವಿಟ್ಟು within the legal ambit ಒಳಗಡೆ ನಾವು ಹೇಗೆ ಮಾರ್ಪಾಡು ಮಾಡಿಕೊಳ್ಳಬಹುದು ಎಂಬ ಬಗ್ಗೆ ಅಭ್ಯಾಸ ಮಾಡಿಕೊಳ್ಳುವ ಕೆಲಸವಾಗಬೇಕು. ಸ್ಕೀಮ್‌ಗಳಿಗೆ ನೀರನ್ನು ಕೊಟ್ಟು ಬೇರೆ ಕಡೆಗೆ allocation ಆದರೆ we cannot do anything. GIM ಮಾಡಿದ್ದೀರಿ. ನೀವು GIM ನಲ್ಲಿ ಆ ಸ್ಕೀಮ್‌ಗೆ ನೀರನ್ನು ಕೊಡುತ್ತೇವೆಂದು agreementಗೆ ಸಹಿ ಹಾಕಿ commitment ಮಾಡಿ industries ಈಗಾಗಲೇ ಸ್ಥಾಪನೆ ಮಾಡಿಕೊಳ್ಳುತ್ತಿದ್ದಾರೆ. ನಾಳೆ ಅವನೂ ಕೂಡ ನ್ಯಾಯಾಲಯಕ್ಕೆ ಹೋಗುತ್ತಾನೆ. There are some intricate issues. ಬಹಳ intricacies ಇದರಲ್ಲಿವೆ. ಬಹಳ ಸೂಕ್ಷ್ಮತೆಗಳಿವೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ ಈ ಭಾಗದವರೆಲ್ಲರಿಗೂ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಸಂಬಂಧಪಟ್ಟವರೆಲ್ಲರನ್ನು ಕರೆದು ಕೂಡಲೇ ಒಂದು ಸಭೆ ಮಾಡಿ ತೀರ್ಮಾನವನ್ನು ತೆಗೆದುಕೊಳ್ಳಿ. ಸುದೈವದಿಂದ ನಮ್ಮ ಜಿಲ್ಲೆಯವರೇ ಮಂತ್ರಿಯಾಗಿದ್ದಾರೆ. ಆದರೆ ಅವರು ಜಮೀನನ್ನು ಕಳೆದುಕೊಳ್ಳಲಿಲ್ಲ. ನಮ್ಮ ಮೇಲೆ ಇದ್ದಾರೆ ನಮ್ಮ ರಕ್ಷಣೆಗೆ ಬರಲಿಯೆಂಬುದು ನಮ್ಮ ಉದ್ದೇಶ. ಕಳೆದುಕೊಂಡವರು ಇಲ್ಲೇ ಕುಳಿತಿದ್ದೇವೆ. ಏನೋ ಆಗುತ್ತದೆಂದು ಬಹಳ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇವೆ. ಆದರೆ ಇನ್ನೂ ಏನೂ ಆಗಿಲ್ಲ. ಮಾನ್ಯ ಸಚಿವರಾದ ಎಂ.ಬಿ.ಪಾಟೀಲ್ ಅವರು 640 ರ ಮೇಲಿದ್ದರೂ ನೀರನ್ನು ಹೊಂದಿದ್ದಾರೆ. ಅದಕ್ಕೆ ಮೊದಲು ಅವರಿಗೆ ಧನ್ಯವಾದಗಳನ್ನು ಅರ್ಪಿಸಬೇಕು. ಮಾನ್ಯ ಸದಸ್ಯರಾದ ಕಾರಜೋಳ ಮತ್ತು ಸಚಿವರಾದ ಎಂ.ಬಿ. ಪಾಟೀಲ್ ಇಬ್ಬರೂ ಸೇರಿ 640–660 ರವರೆಗೆ ತೆಗೆದುಕೊಂಡು ಹೋಗಿದ್ದಾರೆ. ನಮಗೆ ದಯಮಾಡಿ ನ್ಯಾಯವನ್ನು ಒದಗಿಸಬೇಕು. ಮಾರ್ಪಾಡು ಮಾಡುವುದಕ್ಕೆ ಹೋಗದೆ ಎಲ್ಲಿ ಏನಾಗಿದೆ

ಅದನ್ನು ಯಾವ ರೀತಿ ಸರಿಪಡಿಸಬೇಕು ಎನ್ನುವುದನ್ನು ನೋಡಿ ಅದಕ್ಕೆ ಸಮಿತಿ ರಚಿಸುತ್ತೀರೋ ಅಥವಾ ಬೇರೆ ಏನಾದರೂ ಮಾಡಿ ನಮಗೆ ನ್ಯಾಯವನ್ನು ಒದಗಿಸಿಕೊಡಿ. ಮಾನ್ಯ ಅಧ್ಯಕ್ಷರೆ, ನಾವು ಬಹಳ ಸೌಮ್ಯವಾಗಿ ಮಾತನಾಡುತ್ತಿದ್ದೇನೆ. ಮಾನ್ಯ ಸದಸ್ಯರಾದ ಎ.ಎಸ್. ಪಾಟೀಲ್ (ನಡಹಳ್ಳಿ), ಅವರು ಹೇಳಿದ ಹಾಗೆ ಮತ್ತು ಜನರ ಭಾವನೆಗಳು ಬಹಳಷ್ಟು ತೀಕ್ಷ್ಣಗೊಂಡಿವೆ. ಇದಕ್ಕೆ ಒಂದೇ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ನಾಗರಬೆಟ್ಟ ಲಿಫ್ಟ್ ಇರಿಗೇಷನ್, ದಿವಂಗತ ಜೆ.ಎಸ್. ದೇಶ್‌ಮುಖ್ ಅವರು ಇದ್ದಂತಹ ಕಾಲದಲ್ಲಿ ನೀಲನಕ್ಷೆಯನ್ನು ತಯಾರು ಮಾಡಿದ್ದರು. ಆದರೆ ಅದು ಎಲ್ಲಿ ಮಾಯವಾಯಿತೋ ಗೊತ್ತಿಲ್ಲ. ಆದರೂ ನಾನು ಅದರ ಮೇಲೆ ಸಾಕಷ್ಟು reference ಕೊಟ್ಟಿದ್ದೆ. ಈ ಬಗ್ಗೆ ಹಿಂದಿನ ಮಂತ್ರಿಗಳಿಗೂ ಸಹ ಹೇಳಿದ್ದೆ. ಆದರೂ ಕಡತ ತೆಗೆಯುವ ಪ್ರಯತ್ನವೇ ಆಗಲಿಲ್ಲ. ಪುನಃ ಆ ಕಡತವನ್ನು ಆಲಮಟ್ಟಿಯಿಂದ ಹಿಂದಕ್ಕೆ ತರಿಸಿದೆ. ಎಲ್ಲಿ ಹೋಯಿತು, ಏಕೆ ಹೋಯಿತು? ಆದರೆ ಅದಕ್ಕೆ ಬೇಕಾದುದು ಒಂದು ಟಿ.ಎಂ.ಸಿ. ನೀರು ಮಾತ್ರ. ಆ ರೀತಿ ಅನ್ಯಾಯವಾಗಿರುವುದರಿಂದ ದಯಮಾಡಿ ಪುನಃ ಪರಿಶೀಲಿಸಿ ನಮಗೆ ನ್ಯಾಯ ಒದಗಿಸಬೇಕು.

ಅಧ್ಯಕ್ಷರು: ಮೊದಲು ಮಾನ್ಯ ಸಚಿವರು ಉತ್ತರ ಹೇಳಲಿ. ಇನ್ನೂ ಏನಾದರೂ ಮಾಹಿತಿ ಕೇಳುವುದಾದರೆ ನಂತರ ಕೇಳಿ. ಸಚಿವರೇ ನೀವು ಉತ್ತರ ಹೇಳಿ.

ಶ್ರೀ ವಿಜಯಾನಂದ ಕಾಶಪ್ಪನವರ್ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ನೀವು ಮಾತನಾಡಿದ್ದೀರಿ. ಮೊದಲು ಅವರು ಉತ್ತರ ಹೇಳಲಿ.

ಶ್ರೀ ಎಂ. ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) : ಸದಸ್ಯರು ಯಾರಾದರೂ ಮಾತನಾಡುವುದಿದ್ದರೆ ಮಾತನಾಡಲಿ. ನಂತರ ಉತ್ತರ ಹೇಳುತ್ತೇನೆ.

ಅಧ್ಯಕ್ಷರು : ಸಮಯ ಆಗಿರುವುದರಿಂದ ಅವರು ಮೊದಲು ಉತ್ತರ ಹೇಳಲಿ. ನಂತರ ಮಾಹಿತಿ ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವಿಜಯಾನಂದ ಕಾಶಪ್ಪನವರ್ : ಇದು ಬಹಳ ದೊಡ್ಡ ವಿಷಯವಾಗಿದ್ದು ಕೇವಲ ಅರ್ಧಗಂಟೆ ಕಾಲಾವಧಿ ಮಾತ್ರ ಕೊಟ್ಟಿದ್ದೀರಿ. ಆದ್ದರಿಂದ ಒಂದೇ ಒಂದು ಪ್ರಶ್ನೆಯನ್ನು ಹೇಳುತ್ತೇನೆ.

ಅಧ್ಯಕ್ಷರು : ನೀವು ಈಗಾಗಲೇ ಮಾತನಾಡಿದ್ದೀರಿ. ಮತ್ತೇ ಏನು ಮಾತನಾಡುತ್ತೀರಿ. ನೀವು ಉತ್ತರ ಹೇಳಿ.

ಶ್ರೀ ಎಂ. ಬಿ. ಪಾಟೀಲ್ : ಮಾನ್ಯ ಸದಸ್ಯರಾದ ಎ.ಎಸ್.ಪಾಟೀಲ್ (ನಡಹಳ್ಳಿ), ವಿಜಯಾನಂದ ಕಾಶಪ್ಪನವರ್ ಹಾಗೂ ಹಿರಿಯ ಸದಸ್ಯರುಗಳಾದ ಗೋವಿಂದ ಎಂ. ಕಾರಜೋಳ ಮತ್ತು ಸಿ.ಎಸ್.ನಾಡಗೌಡ ಅವರುಗಳು ಮಾತನಾಡಿ ಬಿಜಾಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಗಳಿಗೆ ನೀರಾವರಿ ಯೋಜನೆಗಳ ನೀರಿನ ಹಂಚಿಕೆಯನ್ನು ಬಚಾವತ್ ತೀರ್ಪಿನಡಿ ಹಂಚಿಕೆಯಾದಂತಹ 173 ಟಿ.ಎಂ.ಸಿ. ನೀರಿನಲ್ಲಿ ಕನಿಷ್ಠ 105 ಟಿ.ಎಂ.ಸಿ. ನೀರನ್ನು ಮರು ಹಂಚಿಕೆ ಮಾಡುವ ಕುರಿತು ನಿಯಮ 69 ರಡಿಯಲ್ಲಿ ಮಾನ್ಯ ಸದಸ್ಯರುಗಳು ಮಹತ್ವವಾದ ಚರ್ಚೆಯನ್ನು ಮಾಡಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಇಂದಿನ ವಾಸ್ತವದ ಪರಿಸ್ಥಿತಿಯನ್ನು ಸದನದ ಮುಖಾಂತರ ತಿಳಿಸ ಬಯಸುತ್ತೇನೆ. ನಂತರ ಏನು ಮಾಡುವುದಕ್ಕೆ ಸಾಧ್ಯ ಎನ್ನುವ ಬಗ್ಗೆ ಹೇಳುತ್ತೇನೆ.

ಶ್ರೀ ಎಂ. ಬಿ. ಪಾಟೀಲ್:- ಮಾನ್ಯ ಸಭಾಧ್ಯಕ್ಷರೆ, ಆಲಮಟ್ಟಿ ಮತ್ತು ನಾರಾಯಣಪುರ ಅಣೆಕಟ್ಟುಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಅವಳಿ ಜಿಲ್ಲೆಯ ಬರಗಾಲದ ಭೂಮಿಗೆ ನೀರಾವರಿ ಯೋಜನೆಗಳನ್ನು ನಿರ್ಮಿಸಿ ಅವಳಿ ಜಿಲ್ಲೆಯ ಉಳಿದ ಭೂಮಿಗೆ ನೀರು ಹರಿಸುವ ಭರವಸೆಯನ್ನು ಈಗಲೂ ಸರ್ಕಾರ ಈಡೇರಿಸಲು ಬದ್ಧವಾಗಿದೆ.

ಬಚಾವತ್ ತೀರ್ಪಿನಲ್ಲಿ (KWDT-I) ಕೃಷ್ಣಾ ಮೇಲ್ದಂಡೆ ಯೋಜನೆಗೆ 155 ಟಿಎಂಸಿಯನ್ನು ಸ್ಕೀಂ 'ಎ' ಅಡಿಯಲ್ಲಿ ನೀಡಲಾಗಿತ್ತು, ತದನಂತರ,

ಸರ್ಕಾರವು ಈ ಯೋಜನೆಗೆ ಕರ್ನಾಟಕದ ಪಾಲಿಗೆ ಬಂದ ಮರು ಉತ್ಪತ್ತಿ ನೀರಿನಲ್ಲಿ 18 ಟಿಎಂಸಿ ಸೇರಿಸಿ, ಕೃಷ್ಣಾ ಮೇಲ್ದಂಡೆ ಯೋಜನೆಗೆ 173 ಟಿಎಂಸಿಯನ್ನು ನಿಗಧಿಪಡಿಸಲಾಗಿತ್ತು. ಇ 173 ಟಿಎಂಸಿಯಲ್ಲಿ ಮೇಲ್ದಂಡೆ ಯೋಜನೆಯಡಿಯಲ್ಲಿ 6.22 ಲಕ್ಷ ಹೆಕ್ಟೇರ್ ನೀರಾವರಿಗೆ ಒಳಪಡಿಸಲಾಗಿದೆ.

ಈಗಾಗಲೇ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1 ಮತ್ತು 2 ರಡಿಯ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ಹಂತ–1 ರ ಪೂರ್ಣಗೊಂಡ ವರದಿಯನ್ನು ಫೆಬ್ರವರಿ 2013 ರಲ್ಲಿ ಹಾಗೂ ಹಂತ–2 ರ ಪೂರ್ಣಗೊಂಡ ವರದಿಯನ್ನು ಆಗಸ್ಟ್ 2012 ರಲ್ಲಿ ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದೆ.

ಈಗಾಗಲೇ ಪೂರ್ಣಗೊಂಡ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1 ಮತ್ತು 2 ರಡಿ ಜಿಲ್ಲಾವಾರು ನೀರಿನ ಬಳಕೆ ಹಾಗೂ ಅಚ್ಚುಕಟ್ಟು ಕ್ಷೇತ್ರದ ವಿವರಗಳು ಈ ಕೆಳಗಿನಂತಿವೆ.

ಕ್ರ ಸಂ.	ಜಿಲ್ಲೆ	ನೀರಾವರಿಯಾಗುವ ಕ್ಷೇತ್ರ (ಹೆಕ್ಟೇರ್)	ನೀರಿನ ಬಳಕೆ (ಟಿಎಂಸಿ)	ಶೇಖಡವಾರು
1	ಗುಲ್ಬರ್ಗ	1.15	31.98	18.48
2.	ಯಾದಗಿರಿ	2.04	56.74	32.80
3	ಬಿಜಾಪುರ	1.77	49.23	28.46
4	ಬಾಗಲಕೋಟೆ	0.22	6.12	3.54
5	ರಾಯಚೂರು	1.04	28.93	16.72
	ಒಟ್ಟು:	**6.22**	**173.00**	**100.00**

ಈ 173 ಟಿಎಂಸಿ.ಯಲ್ಲಿ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ 49.23 ಟಿಎಂಸಿ ಮತ್ತು 6.12 ಟಿಎಂಸಿ.ಯಷ್ಟು ನೀರು ಅನುಕ್ರಮವಾಗಿ ಬಳಕೆಯಾಗುತ್ತಿದೆ. ಶೇಕಡವಾರು ಪ್ರಮಾಣದಲ್ಲಿ ಬಿಜಾಪುರ ಜಿಲ್ಲೆಗೆ 28.46% ಮತ್ತು ಬಾಗಲಕೋಟೆ ಜಿಲ್ಲೆಗೆ 3.54% ರಷ್ಟು ನೀರು ಬಳಕೆಯಾಗುತ್ತಿದೆ.

ಈ 173 ಟಿಎಂಸಿ.ಯನ್ನು ಈಗಾಗಲೇ ಪೂರ್ಣಗೊಂಡಿರುವ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ 1 ಮತ್ತು 2 ಈ ಕೆಳಗೆ ವಿವರಿಸಿರುವಂತೆ ಹಂಚಿಕೆ ಮಾಡಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ನೀರಿನ ಬಳಕೆ (ಟಿಎಂಸಿ)	ನೀರಾವರಿ ಕ್ಷೇತ್ರ (ಹೆಕ್ಟೇರ್‌ಗಳಲ್ಲಿ)
	ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 ಮತ್ತು 2:		
1	ನಾರಾಯಣಪುರ ಎಡದಂಡೆ ಕಾಲುವೆ	13.10	47,223
2	ಶಹಾಪುರ ಶಾಖಾ ಕಾಲುವೆ	34.00	1,22,120
3	ಮುದಬಾಳ ಶಾಖಾ ಕಾಲುವೆ	14.10	51,000
4	ಇಂಡಿ ಶಾಖಾ ಕಾಲುವೆ	37.50	1,31,260
5	ಜೇವರ್ಗಿ ಶಾಖಾ ಕಾಲುವೆ	15.80	57,100
6	ಆಲಮಟ್ಟಿ ಎಡದಂಡೆ ಕಾಲುವೆ	5.60	20,235
7	ನಾರಾಯಣಪುರ ಬಲದಂಡೆ ಕಾಲುವೆ	22.40	84,000
8	ಆಲಮಟ್ಟಿ ಬಲದಂಡೆ ಕಾಲುವೆ	4.50	16,100
9	ಮುಳವಾಡ ಏತ ನೀರಾವರಿ	8.50	30,850
10	ರಾಂಪುರ ಏತ ನೀರಾವರಿ	5.60	20,235
11	ಇಂಡಿ ಏತ ನೀರಾವರಿ	11.90	41,900
	ಒಟ್ಟು	173.00	6,22,023

ಈ ಮೇಲೆ ವಿವರಿಸಿರುವಂತೆ ಮುಳವಾಡ ಏತ ನೀರಾವರಿ, ಇಂಡಿ ಶಾಖಾ ಕಾಲುವೆ, ಇಂಡಿ ಏತ ನೀರಾವರಿ, ಆಲಮಟ್ಟಿ ಎಡದಂಡೆ ಕಾಲುವೆ ಇವುಗಳಡಿ ಬರುವ ಬಿಜಾಪುರ ಜಿಲ್ಲೆಯಲ್ಲಿ 1.77 ಲಕ್ಷ. ಹೆ. ಅಚ್ಚುಕಟ್ಟು ಕ್ಷೇತ್ರಕ್ಕೆ ನೀರಾವರಿ ಒಳಪಟ್ಟಿರುತ್ತದೆ.

ಈಗಾಗಲೇ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 ಮತ್ತು 2 ರಡಿಯ ಕಾಮಗಾರಿಗಳನ್ನು ಬಹುತೇಕ ಪೂರ್ಣಗೊಳಿಸಲಾಗಿದ್ದು, ಹಂತ-1 ರ ಪೂರ್ಣಗೊಂಡ ವರದಿಯನ್ನು ಫೆಬ್ರವರಿ 2013 ರಲ್ಲಿ ಹಾಗೂ ಹಂತ-2 ರ

ಪೂರ್ಣಗೊಂಡ ವರದಿಯನ್ನು ಆಗಸ್ಟ್ 2012 ರಲ್ಲಿ ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದೆ.

ಇದು ವಾಸ್ತವ ಸಂಗತಿ.

ಬಿಜಾಪುರ ಮತ್ತು ಬಾಗಲಕೋಟೆ ಅವಳಿ ಜಿಲ್ಲೆಯ ಬಗ್ಗೆ ಮಾನ್ಯ ಸದಸ್ಯರುಗಳಿಗೆ ಬಹಳಷ್ಟು ಭಾವನೆಗಳಿವೆ. ಆಲಮಟ್ಟಿ ಡ್ಯಾಂ ಕೂಡ ನಮ್ಮ ಜಿಲ್ಲೆಯಲ್ಲಿಯೇ ನಿರ್ಮಾಣಗೊಂಡು ರೈತರು ಲಕ್ಷಾಂತರ ಎಕರೆ ಭೂಮಿಯನ್ನು ಕಳೆದುಕೊಂಡು ನಿರಾಶ್ರಿತರಾಗಿರುವುದಲ್ಲದೇ ಬಹಳಷ್ಟು ತೊಂದರೆಗಳನ್ನು ಅನುಭವಿಸಿದ್ದಾರೆ. ಈಗ ಎಲ್ಲರ ವಿಶೇಷವಾದ ಬೇಡಿಕೆಯೇನೆಂದರೆ, ಕೃಷ್ಣಾ ನ್ಯಾಯಾಧಿಕರಣದ ಸ್ಪಷ್ಟೀಕರಣ–2ರ ಅರ್ಜಿ ಬಂದಿದ್ದು, ಇದು ಬಂದ ನಂತರ 'ಬಿ' ಸ್ಕೀಮ್‌ನಲ್ಲಿರುವ ಯೋಜನೆಗಳು, ಕೃಷ್ಣಾ ಮೇಲ್ದಂಡೆ ಹಂತ–3 ರ ಕಾಮಗಾರಿಗಳಿಗೆ 130 ಟಿ.ಎಂ.ಸಿ. ಇವೆಲ್ಲವೂಗಳನ್ನು ಬಚಾವತ್ ತೀರ್ಪಿನ ಹಿನ್ನೆಲೆಯಲ್ಲಿ 75% dependability ಯಲ್ಲಿ ಆಗಿತ್ತು. ಈ ಎಲ್ಲಾ ಯೋಜನೆಗಳಿಗೆ ಹೆಚ್ಚುವರಿ ನೀರನ್ನು 65% dependability ಮರು ಹಂಚಿಕೆ ಮಾಡಿ 177 ಟಿ.ಎಂ.ಸಿ. ಮಾಡಿ, ಅದರಲ್ಲಿ ನಾಲ್ಕು ಟಿ.ಎಂ.ಸಿ. ನೀರನ್ನು ತುಂಗಭದ್ರಾಕ್ಕೆ ಕಡಿತಗೊಳಿಸಲಾಗಿತ್ತು. ಈ ಸ್ಪಷ್ಟೀಕರಣ ವರದಿಯ ಅರ್ಜಿ ಸಾಕಷ್ಟು ಗೊಂದಲವನ್ನು create ಮಾಡಿದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಮುಂದುವರರೆದ ಭಾಗದ ಮೇಲೆ ಏನು ಸ್ಪಷ್ಟೀಕರಣ ಬಂದಿದೆ, ಅದಕ್ಕೆ ಇವತ್ತು ಮೇಲ್ಮನವಿಯನ್ನು ಸಲ್ಲಿಸಿ ನಮ್ಮ ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲಿಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಅದರಲ್ಲಿ ಸಾಕಷ್ಟು ಗೊಂದಲಗಳು create ಆಗಿವೆ. ಎರಡು ತರಹ interpretation ಗೆ ದಾರಿಗಳಿವೆ. ಮೊದಲನೆಯದಾಗಿ, 734 ಟಿ.ಎಂ.ಸಿ. ನೀರು ಏನಿದೆ, ಸರಿಸಮವಾಗಿ ಎಲ್ಲದ್ದಕ್ಕೂ ನೇರವಾಗಿ ಹಂಚಿದರೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ. ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಕ್ಕೆ en-block ನಿಂದ allocation ಇದೆ. ಇವತ್ತಿನ ದಿವಸ ಇದೆ. ನಾವೂ ಸಹ ಅದನ್ನು en-block ಎಂದು ಭಾವಿಸಿದ್ದೇನೆ. ಸ್ಪಷ್ಟೀಕರಣ ಅರ್ಜಿಯ ಮುಂದುವರೆದ ಭಾಗದಲ್ಲಿ ಎಲ್ಲೋ ಒಂದು ಕಡೆ ಅಥವಾ 2–3 ಕಡೆ ಈ ಗೊಂದಲವನ್ನು create ಮಾಡಿ

ಖರೀಫಿನ ಸಮಸ್ಯೆ ಉದ್ಭವಿಸುತ್ತದೆ ಎಂಬ ಪ್ರಶ್ನೆ ಇದೆ. ಇನ್ನೊಂದು ಕಡೆ manner of withdrawl ಸೆಕ್ಷನ್ 9ಎ ರಲ್ಲಿ ಅದು ಕೂಡ ಇವತ್ತಿನ ದಿವಸ ಸಾಕಷ್ಟು ಗೊಂದಲವನ್ನು ಸೃಷ್ಟಿ ಮಾಡಿದೆ. ಒಂದು ಕಡೆ 734 ಟಿ.ಎಂ.ಸಿ. ನೀರನ್ನು ಖರೀಫಿಗೆ ಬಳಸಿಕೊಂಡರೆ ಯಾವುದೇ ಸಮಸ್ಯೆ ಬರುವುದಿಲ್ಲ. ಇನ್ನೊಂದು ಕಡೆ ಖರೀಫಿಗೆ ನೀರನ್ನು ಹೇಗೆ ಬಳಸುತ್ತೀರಿ ಎಂಬ ಪ್ರಶ್ನೆ ಬರುತ್ತದೆ. ಮೂರು ಯೋಜನೆಗಳಿವೆ, Upper Bhadra, ಸಿಂಗಟಾಲೂರು, Upper Tunga ಈ ಮೂರು ಯೋಜನೆಗಳ ಏನು scheme A ನಲ್ಲಿತ್ತು. ಇವತ್ತಿನ ದಿವಸ scheme B ನಲ್ಲಿದೆ. 65% dependability ಏನಿತ್ತು, ಅದರಲ್ಲಿ ಶಿಫ್ಟ್ ಮಾಡಿದ್ದಾರೆ. ಸಾಕಷ್ಟು ಗೊಂದಲ create ಆದ ಮೇಲೆ ಸ್ವಾಭಾವಿಕವಾಗಿ ನಮ್ಮ ಭಾಗದ ಜನರು ವಿಶೇಷವಾಗಿ ಬಿಜಾಪುರ, ಬಾಗಲಕೋಟೆ ಜಿಲ್ಲೆ ಹಾಗೂ ತುಂಗಭದ್ರ, Upper Bhadra, ಸಿಂಗಟಾಲೂರು, Upper Tunga ಎಲ್ಲಾ ಕಡೆ ಸಾಕಷ್ಟು ಆತಂಕ ಬಂದಿದೆ. ನಮ್ಮ ಪಾಲಿನ ನೀರನ್ನು ಪಡೆಯುವುದಕ್ಕೆ, ನ್ಯಾಯವನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ. ಕಾನೂನಿನ ನೆರವನ್ನು ಪಡೆದುಕೊಳ್ಳುತ್ತಿದ್ದೇವೆ. ಈ ವಿಷಯಗಳ ಬಗ್ಗೆ ಮಾನ್ಯ ನಾಡಗೌಡರು ಹೇಳಿದಂತೆ, ಒಂದು Expert Committee ಯನ್ನು ಮಾಡಿ, ಯಾವ ರೀತಿ ನೀರಿನ ಮರು ಹಂಚಿಕೆ ಮಾಡಬಹುದು ಎಂಬುದರ ಬಗ್ಗೆ ಚರ್ಚೆ ಮಾಡಬೇಕು. ನಾನು ಈಗಾಗಲೇ ಯಾವುದರಲ್ಲಿ ಹಂಚಿಕೆಯಾಗಿದೆ? ಯಾವ ಜಿಲ್ಲೆಗಳಿಗೆ ಹೋಗಿವೆ? ಯಾವ ಯೋಜನೆಗಳಿಗೆ ಹೋಗಿವೆ? Status ಹೇಳಿದ್ದೇನೆ. ಮರು ಹಂಚಿಕೆ ಸಾಧ್ಯವೋ? ಇಲ್ಲವೋ? ಎಂದು ಕಾನೂನಿನ ಸಲಹೆಗಳನ್ನು ಪಡೆದುಕೊಂಡು ನಮ್ಮ ಅವಳಿ ಜಿಲ್ಲೆಯ ಶಾಸಕರ ಅಭಿಪ್ರಾಯವನ್ನು ಪಡೆದುಕೊಂಡು ಇವತ್ತಿನ ದಿವಸ ಎಷ್ಟು ನ್ಯಾಯವನ್ನು ಒದಗಿಸಲು ಸಾಧ್ಯವಿದೆ, ಆ ನ್ಯಾಯವನ್ನು ಒದಗಿಸಲು ನಾವು ಬದ್ಧರಾಗಿದ್ದೇವೆಂದು ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಗೋವಿಂದ ಎಂ.ಕಾರಜೋಳ ರವರು ಹೇಳುವುದೇನೆಂದರೆ, 173 ಟಿ.ಎಂ.ಸಿ. ನೀರಿನ ಬಗ್ಗೆ ತಾವು ವಿವರವನ್ನು ಕೊಟ್ಟಿದ್ದೀರಿ. ಬಾಗಲಕೋಟೆ, ವಿಜಾಪುರಕ್ಕೆ ಅನ್ಯಾಯವಾಗಿದೆ ಎಂದು ಅವರು

ಹೇಳುತ್ತಿದ್ದಾರೆ. ಇದರಲ್ಲಿ maximum ನೀರನ್ನು ಅವರಿಗೆ ಕೊಡುವುದಕ್ಕೆ ಅವಕಾಶವಿದ್ದರೆ ಎರಡೂ ಜಿಲ್ಲೆಯ ಶಾಸಕರನ್ನು ಕರೆದು ಅವರೊಡನೆ ಕುಳಿತು ಚರ್ಚೆ ಮಾಡಿ ಪರಿಹಾರ ಕಂಡುಹಿಡಿಯುವುದಕ್ಕೆ Expert Committee ಮಾಡಿ ಎಂದು ತಾವು ಹೇಳಿದ್ದು ಸರಿಯಿದೆ. Expert Committee ಅಂದರೆ ನೀವು ಸುಪ್ರೀಂ ಕೋರ್ಟ್‌ಗೆ ಹೋಗಬೇಡಿ. 173 ಟಿ.ಎಂ.ಸಿ. ನೀರನ್ನು equitable ಆಗಿ distribution ಮಾಡುವುದಕ್ಕೆ ಏನು scope ಇದೆ, ಅದನ್ನೂ ಮಾಡಿ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ):–ಅಧ್ಯಕ್ಷರೆ, ನನ್ನ ಪಾಯಿಂಟ್ ಅದಲ್ಲ. ಒಂದು ತೀರ್ಪಿನಲ್ಲಿ ಏನು ಬಂದಿದೆ.

ಅಧ್ಯಕ್ಷರು: ಅದು ಬೇಡಿ, ಆ ತೀರ್ಪನ್ನು ಬಿಟ್ಟುಬಿಡಿ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ):– ಇದನ್ನು ಬಹಳ ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. 173 ಟಿ.ಎಂ.ಸಿ. ನೀರನ್ನು ಅವರಿಗೆ ಕೊಟ್ಟಿದ್ದೀರಿ ನಮಗೆ ಕೊಡಿ ಎಂದು ನಾನು ಕೇಳುತ್ತಿಲ್ಲ. ನಾನು ಹೇಳುವುದೇನೆಂದರೆ, 173 ಟಿ.ಎಂ.ಸಿ. ನೀರನ್ನು ಮುಂಗಾರು ಬೆಳೆಗೆ ಹಂಚಬೇಕು ಹಾಗೂ B Scheme ಅನ್ನು ಮರು ಹಂಚಿಕೆ ಮಾಡಿ. Legal Expert already opinion ಕೊಟ್ಟಿದ್ದಾರೆ. ಕಾನೂನು ಪ್ರಕಾರ ಯಾವುದು ತೊಂದರೆಯಿಲ್ಲ. ನೀವೇ ಸಭೆ ಕರೆದು ಚರ್ಚೆ ಮಾಡಿದ್ದೀರಿ. ಆದಾದ ಮೇಲೆ, Expert Committee ಮಾಡುವ ಪ್ರಶ್ನೆ ಹೇಗೆ ಬರುತ್ತದೆ? ಕಾನೂನು ಬದ್ಧವಾಗಿ ಅವಕಾಶವಿದೆ. ಅದನ್ನು ಮಾಡಬೇಕು.

ಅಧ್ಯಕ್ಷರು: ಅದನ್ನೇ ನಾನು ಹೇಳಿದ್ದು. ಅದಕ್ಕೆ ನಾನು ಸಲಹೆ ಕೊಡುವುದೇನೆಂದರೆ, ನಿಮ್ಮ ಶಾಸಕರನ್ನು ಕರೆದು ಚರ್ಚಿಸಿ ಎಂದು. ನೀವೂ ಯಾರೂ ನನ್ನ ಮಾತನ್ನು ಕೇಳುವುದಕ್ಕೆ ರೆಡಿಯಿಲ್ಲವಲ್ಲಾ? ಇದು very simple ಆಗಿದೆ. ಅದನ್ನು complicate ಮಾಡುವುದಕ್ಕೆ ಹೋಗಬೇಡಿ. 173 ಟಿ.ಎಂ.ಸಿ.

ನೀರನ್ನು ಪುನರ್ ಹಂಚಿಕೆ ಮಾಡಬೇಕೆಂದು ಅವರು ಕೇಳಿದ್ದಾರೆ. ಅದರ ಬಗ್ಗೆ ಸಮಾಲೋಚನೆ ಮಾಡಿ.

ಶ್ರೀ ಎಂ.ಬಿ. ಪಾಟೀಲ್: ಮಾನ್ಯ ಗೋವಿಂದ ಎಂ.ಕಾರಜೋಳರವರೆ, ಇದರಲ್ಲಿ ರಾಜಕೀಯ ಮಾಡುವುದು ಬೇಡ. ತಾವು ಬಹಳಷ್ಟು ತಿಳಿದುಕೊಂಡಿದ್ದೀರಿ. ಹಿರಿಯ ಸದಸ್ಯರಿದ್ದೀರಿ. ಹಿರಿಯ ಸಚಿವರಾಗಿದಾಗಿದ್ದವರು. ಇವತ್ತಿನ ದಿವಸ status ಅನ್ನು ಹೇಳಿದ್ದೇನೆ. ಮಾನ್ಯ ಎ.ಎಸ್.ಪಾಟೀಲ್ (ನಡಹಳ್ಳಿ) ಅವರು ಕೇಳಿದ್ದು ಏನು? ನಮಗೆ ಹಂಚಿಕೆಯಾಗಿರುವಂಥ ನೀರಿನಲ್ಲಿ ಖರೀಫ್‌ಗೆ ಬಳಸಲು ಸಾಧ್ಯವಿದೆಯೇ ಎನ್ನುವುದನ್ನು ಕೇಳಿದ್ದಾರೆ. ಅದಕ್ಕೆ ನಾನು Expert, Legal, ಶಾಸಕರನ್ನು ಹೀಗೆ ಎಲ್ಲರನ್ನೂ ಒಳಗೊಂಡು ಏನು ಪರಿಹಾರ ಸಿಗಲು ಸಾಧ್ಯವಾಗುತ್ತದೆ? ಏನು possibility ಆಗುತ್ತದೆ, ಆ ಪ್ರಕಾರ ಸಂಪೂರ್ಣವಾಗಿ ಪ್ರಯತ್ನ ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: Expert Committee ದಯವಿಟ್ಟು ಮಾಡುವುದು ಬೇಡ. Expert Committee ಅವಶ್ಯಕತೆ ಇಲ್ಲ. ನಮ್ಮನ್ನೇ ಅವರು ಕರೆಯಲಿ. ನಾವೇ ಅದರ ಬಗ್ಗೆ ಮಾತನಾಡುತ್ತೇವೆ.

ಅಧ್ಯಕ್ಷರು: ಪ್ರಾರಂಭದಲ್ಲಿ ಅವರನ್ನೆಲ್ಲಾ ಕೂರಿಸಿಕೊಂಡು ಮಾತನಾಡಿರಿ. Expert Committee ಅವಶ್ಯಕತೆಯಿದೆ ಎಂದು ಕಂಡುಬಂದಲ್ಲಿ ಮುಂದುವರೆಸಿ.

ಶ್ರೀ ಬಿ. ಸಿದ್ದನ್ನಾಮಗೌಡ: ತಾರತಮ್ಯ ಹೇಗಾಗಿದೆ ಎಂದರೆ, ನಮ್ಮ ಬಾಗಲಕೋಟೆ ಜಿಲ್ಲೆಗೆ Water allotment ತೋರಿಸಿದ್ದಾರೆ. ಬಾಗಲಕೋಟೆಗೆ 0.22 ಎಂದು ತೋರಿಸಿದ್ದಾರೆ. ಅದರಲ್ಲಿ 6 ಟಿ.ಎಂ.ಸಿ ನಮ್ಮ ಬಾಗಲಕೋಟೆ ಜಿಲ್ಲೆಗೆ allot ಮಾಡಿದ್ದಾರೆ. ಅದರಿಂದ ಸುಮಾರು 55,000 ಎಕರೆಗೆ ನೀರಾವರಿ ಆಗುತ್ತದೆ. ನಾವು ಒಂದೂವರೆ ಲಕ್ಷ ಎಕರೆ ಭೂಮಿಯನ್ನು

ಕಳೆದುಕೊಂಡಿದ್ದೇವೆ. ಬಾಗಲಕೋಟೆ ಜಿಲ್ಲೆಗೆ ಆದ್ಯತೆಯನ್ನು ಕೊಡಬೇಕು. ಹೆಚ್ಚಿನ ನೀರಾವರಿ ಸೌಲಭ್ಯವನ್ನು ಕೊಡಬೇಕು.

ಅಧ್ಯಕ್ಷರು: ಇದು Administrative matetr ಆಗಿದೆ. ತಾವು ಹೀಗೆ question ಮಾಡಬೇಡಿ. ಈಗ ಒಂದು ಪ್ರಶ್ನೆ ಎತ್ತಿದ್ದಾರೆ. 173 ಟಿ.ಎಂ.ಸಿ. ನೀರನ್ನು ಎರಡು ಜಿಲ್ಲೆಗೆ ಹಂಚಿ ಎಂದು ಕೇಳುತ್ತಿದ್ದಾರೆ. ನಿಮ್ಮನ್ನೆಲ್ಲಾ ಕೂರಿಸಿಕೊಂಡು ಚರ್ಚೆ ಮಾಡಿ ಸಲಹೆಯನ್ನು ಪಡೆದುಕೊಂಡು ಏನೇನು ಅವಕಾಶ ಇದೆ ಎಂಬ ಪರಿಶೀಲನೆ ಮಾಡುತ್ತಾರೆ. ಅದಕ್ಕೆ ಅವರೂ ಸಹ ಒಪ್ಪಿಕೊಂಡಿದ್ದಾರೆ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ):-ನೀರನ್ನು ಮರು ಹಂಚಿಕೆ ಮಾಡುವಾಗ ಸಂದರ್ಭದಲ್ಲಿ ಇದನ್ನು ಸೇರಿಸಿಕೊಳ್ಳಿ.

ಅಧ್ಯಕ್ಷರು: ಎಲ್ಲರೂ ಮೊದಲು ಸೇರಿಕೊಂಡು ಚರ್ಚೆ ಮಾಡಿ. ಅವಶ್ಯಕತೆ ಇದ್ದರೆ if it is justifiable ಇದ್ದರೆ ಅವರೇ ಮಾಡುತ್ತಾರೆ.

(ಗೊಂದಲ)

ಶ್ರೀ ಎಂ. ಬಿ. ಪಾಟೀಲ್: ಅಧ್ಯಕ್ಷರೆ, ಇದರ ಸಾಧ್ಯತೆಗಳನ್ನು ಪರಿಶೀಲನೆ ಮಾಡುತ್ತೇನೆ. ನಾವು ಇದನ್ನು ಬಹಳವಾಗಿ ಗಂಭೀರವಾಗಿ ಪರಿಗಣಿಸಿ ಮರು ಹಂಚಿಕೆ ಮಾಡಲು ಸಾಧ್ಯತೆ ಇದೆಯೋ? ಇಲ್ಲವೋ? ಎಂಬುದನ್ನು ಮಾನ್ಯ ಗೋವಿಂದ ಕಾರಜೋಳ ಅವರನ್ನು ಹಾಗೂ ಶಾಸಕರನ್ನು ಕರೆದು ಚರ್ಚೆ ಮಾಡಿಯೇ ಮಾಡುತ್ತೇವೆ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ನಾವು ನಿಮ್ಮನ್ನು (ಮಂತ್ರಿಗಳು) ಮುಜುಗರಕ್ಕೆ ಸಿಕ್ಕಿಸಬೇಕೆಂದು ಈ ಪ್ರಶ್ನೆಯನ್ನು ಕೇಳುತ್ತಿಲ್ಲ.

ಅಧ್ಯಕ್ಷರು: ಪಾಟೀಲರೆ; ಪಾಟೀಲರೇ ಒಂದು ನಿಮಿಷ ಈ ಕಡೆ ಕೇಳಿ...

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಅಧಿಕಾರಿಗಳು ಹೇಗೆ misguide ಮಾಡುತ್ತಾರೆಂದರೆ, 1.77 ನೀರಾವರಿ ಕ್ಷೇತ್ರಕ್ಕೆ . . . . . .

(ಗೊಂದಲ)

ಅಧ್ಯಕ್ಷರು: ನೀವು ಯಾರ ಮಾತನ್ನೂ ಕೇಳುವುದಿಲ್ಲ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): Work Allotment 49.2... ಇದರಲ್ಲಿ ಯಾರದೂ ತಪ್ಪು?

ಅಧ್ಯಕ್ಷರು: ಸಾಕು. ಈಗ ಸದನವನ್ನು ಮುಂದೂಡಿ ನಾಳೆ ಬೆಳಗ್ಗೆ 11 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 29 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 19ನೇ ಫೆಬ್ರವರಿ 2014 ರ ಬುಧವಾರ ಬೆಳಿಗ್ಗೆ ಸೇರಲು ನಿಶ್ಚಯಿಸಿತು)